INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -4, July--August, 2025
PageNo,01-16
Peer -Reviewed, Refereed Journal

# ಅಂಬೇಡ್ಕರ್ ಮತ್ತು ಮಾನವೀಯ ಮೌಲ್ಯಗಳು

**ಡಾ.ಇಂದಿರಮ್ಮ.**[1]

**ಭಾ**ರತೀಯ ನೆಲದಲ್ಲಿ ಡಾ.ಅಂಬೇಡ್ಕರ್ ಅವರು ಅಸ್ಪೃಶ್ಯರು, ಶೋಷಿತರು, ಹಿಂದುಳಿದ ವರ್ಗಗಳು, ಬಲಹೀನ ವರ್ಗಗಳು ಹಾಗೂ ಮಹಿಳೆಯರ ಏಳಿಗೆಗಾಗಿ ಹಾಗೂ ಅವರುಗಳ ಮಾನವೀಯ ಮೌಲ್ಯಗಳಿಗಾಗಿ ಪ್ರತಿಭಟನೆ ಮಾಡಿ ಶ್ರಮಿಸಿ ಸಾಧಿಸಿದ ಸಾಧನೆಗಳು ವಿಶ್ವವಿಧಿತವಾದವು. ಆದರೆ, ಬಹುಮುಖ್ಯವಾಗಿ ಸಂವಿಧಾನ ರಚನಾ ಸಭೆಯಲ್ಲಿ ಮತ್ತು ಕರಡು ಸಮಿತಿಯ ಅಧ್ಯಕ್ಷರಾಗಿ ಅವರು ಗೈದಿರುವ ಸಾಧನೆ ಅಪಾರವಾದದ್ದು. ಏಕೆಂದರೆ, ಅಂಬೇಡ್ಕರ್ ಅವರು ವ್ಯವಹರಿಸಿದ ರೀತಿ–ನೀತಿ, ವಿಚಾರ–ವಿಮರ್ಶೆಗಳನ್ನು ಸ್ವೀಕರಿಸಿದಂಥ ವಿಧಾನ, ಪ್ರಶ್ನಾವಳಿಗಳಿಗೆ ಉತ್ತರಿಸುವಲ್ಲಿ ತೋರಿದಂಥ ತಿಳುವಳಿಕೆ, ಜಾಣತನದ ತಾಳ್ಮೆ ಜಗತ್ತು ಅರಿಯದ ಸತ್ಯ. ಅಂಬೇಡ್ಕರ್ ಅವರು ನಡೆದಾಡುವ ಮೂಲಕ ಈ ಜಗತ್ತಿಗೆ ಮಾನವತೆಯನ್ನು ಸಾರಿರುವ ಮಹಾನ್ ಚೇತನವಾಗಿದ್ದಾರೆ. ಇವರು ಸಾರಿರುವ ಮಾನವೀಯ ನೆಲೆಯಿಂದಲೇ ಜೀವಪರ ಮತ್ತು ಮಾನವಪರ ತತ್ವಗಳನ್ನು ನಿರೂಪಿಸಲಾಗಿದೆ.

ಆದಿಮಾನವನ ಕಾಲಸಂದರ್ಭದಿಂದಲೂ ಸಹಮತ ಎಂಬುದು ಮಾನವ ಕುಲದ ಜೀವನದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ರೂಪಿಸುತ್ತಿರುವುದನ್ನು ಕಾಣಬಹುದು. ಅಲ್ಲದೆ, ಬಹುಮುಖ್ಯವಾಗಿ ಅದನ್ನು ಮೀರಿಸಿದ ಶಕ್ತಿ ಮತ್ತೊಂದಿಲ್ಲ. ಏಕೆಂದರೆ, ಇದು ಮನುಷ್ಯರನ್ನು ಒಟ್ಟುಗೂಡಿಸಿ, ಸಾಮಾಜಿಕವಾಗಿ ಭದ್ರತೆಯನ್ನು ಕಾಪಾಡಿರುವುದುಂಟು. ಹಾಗೆಯೇ, ಆಧ್ಯಾತ್ಮಿಕ ಸಾಧನೆಗೆ ನೆರವಾಗಿರುವುದುಂಟು. ಇದು ಮಾನವ ಕುಲದ ವಿಭಜನೆಗೆ ಕಾರಣವಾಗಿರುವಂತೆಯೇ, ಇದರ ಹೆಸರಿನಲ್ಲಿ ಯುದ್ಧಗಳು ನಡೆದು ಭೂಮಂಡಲವೂ ರಕ್ತದಿಂದ ತೊಯ್ದಿರುವುದೂ ಕೂಡ ಜಾಗತೀಕ ಸತ್ಯ. ಮತ್ತೇ ತಮ್ಮ ತಮ್ಮ ಧರ್ಮವೇ ಸರ್ವಶ್ರೇಷ್ಠವೆಂದೂ, ಅದನ್ನು ನಂಬಿದವರಿಗೆ ಸ್ವರ್ಗಸುಖ ಖಂಡಿತವಾಗಿಯೂ ಖಾತರಿ ಆಗುತ್ತದೆ ಎಂದೂ ವಿವಿಧ ಧರ್ಮಬೋಧಕರು ಪ್ರಚಾರವನ್ನು ಮಾಡಿರುವುದು ಸಹ ಉಂಟು. ಈ ರೀತಿಯಾಗಿ 'ಮತ' ಅಸಮಾನತೆ ಹಾಗೂ ಮಾನವೀಯ ಮೌಲ್ಯಗಳನ್ನು ಪ್ರಧಾನವಾಗಿ ವಿಘಟಿಸುತ್ತಿದೆ.

---

**[1]ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೋಲಾರ.**

ಮಾನವ ಪರಿಸರದಲ್ಲಿ ಪ್ರಸ್ತುತ ಬಹುಚರ್ಚಿತವಾಗುತ್ತಿರುವ 'ಮಾನವೀಯ ಮೌಲ್ಯ ಅಥವಾ ಮಾನವತಾವಾದ'ದ ವಿಷಯವು ತುಂಬಾ ಮಹತ್ವದಾಗಿದೆ. ಏಕೆಂದರೆ, ಮನುಷ್ಯನ ಸ್ವಾತಂತ್ರ್ಯತೆ, ಭದ್ರತೆ, ಘನತೆ, ಗೌರವ, ಪ್ರೀತಿಯ ಬದುಕು ಇವುಗಳನ್ನು ಪ್ರಧಾನವಾಗಿ ಪ್ರತಿಬಿಂಬಿಸುತ್ತದೆ. ಆದ್ದರಿಂದ ಮನುಷ್ಯ ವಿರೋಧಿ ಚಟುವಟಿಕೆಗಳನ್ನು ತಡೆಗಟ್ಟುವುದೇ 'ಮಾನವತಾವಾದ'. ಇದು ಜಾಗತಿಕ ಸಂದರ್ಭದಲ್ಲಿ ಪ್ರಯೋಗತ್ಮಾಕವಾಗಿ ಪ್ರಯೋಗಿಸಿದ್ದು. ಎರಡನೇ ಪ್ರಾಪಂಚಿಕ ಯುದ್ಧದ ನಂತರ ಸಾಂಕೇತಿಕವಾಗಿ ಹುಟ್ಟಿಕೊಂಡಿರುವುದು ಕಂಡುಬಂದಿದ್ದರೂ, ಇದರ ಪರಿಕಲ್ಪನೆಯೂ ಮಾನವನ ಹುಟ್ಟಿನಷ್ಟೆ ಆದಿಮವಾಗಿದೆ. ಇಡೀ ಜಗತ್ತಿನ ಚರಿತ್ರೆಯ ಸಂದರ್ಭದಲ್ಲಿ ಬುದ್ಧಗುರುವನ್ನು ಮೊದಲುಗೊಂಡಂತೆ ಹಲವು ವಿಶ್ವಶ್ರೇಷ್ಠ ಮಹಾನ್ ಮಾನವತಾವಾದಿಗಳು, ಸಾಧು-ಸಂತರು ಹಾಗೂ ಸಮಾಜ ಸುಧಾರಕರು ಸಾಲು-ಸಾಲಾಗಿ ಕಂಡುಬರುತ್ತಾರೆ. ಈ ಮಹಾನ್ ಮಾನವತಾವಾದಿಗಳು ಒಂದಲ್ಲ ಒಂದು ರೀತಿಯಲ್ಲಿ ಮಾನವೀಯ ಮೌಲ್ಯಗಳನ್ನು ಸಮಾಜದಲ್ಲಿ ಪ್ರತಿಷ್ಠಾಪಿಸುವ ಸಲುವಾಗಿ ತಮ್ಮ ತಮ್ಮ ಕಾಲಘಟ್ಟದಲ್ಲಿ ಪ್ರಾಮಾಣಿಕವಾಗಿ ದುಡಿದಿದ್ದಾರೆ. ಅಂಥವರಲ್ಲಿ 20ನೇ ಶತಮಾನದ ಕಾಲಸಂದರ್ಭದಲ್ಲಿ ಶೋಷಿತರ ಧಮನಿತ ಬದುಕಿನಲ್ಲಿ ವಿದ್ಯುತ್ ಸಂಚಲನವನ್ನು ಮೂಡಿಸಿ ಅವರ ಜೀವನದ ಹೊಸ ಬೆಳಕಿಗೆ ದಾರಿದೀಪವಾಗಿ ಬೆಳಗಿದವರಲ್ಲಿ ಅಂಬೇಡ್ಕರ್ ಅವರು ಅಗ್ರಗಣ್ಯರಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಮಾನವ ಸಮಾಜವನ್ನು ಕಟ್ಟುವಂಥ ಹೋರಾಟಗಳು ಇಂದಿಗೂ ಇದ್ದರೂ ಪುರೋಹಿತಶಾಹಿ ಮನಸ್ಸುಗಳು ಅಮಾನವೀಯತೆಯನ್ನು ಪೋಷಿಸುತ್ತಲೆ ಬಂದಿವೆ. ಇದರ ನಿರ್ನಾಮಕ್ಕೆ ನಿರಂತರವಾದ ಮಾನವ ಪರ ಹೋರಾಟಗಳು ಅಗತ್ಯ. ಅದಕ್ಕೆ ಪೂರಕವಾಗಿ ಶ್ರಮಿಸಿದರು ಹಾಗೂ ಅವರ ವ್ಯಕ್ತಿತ್ವನ್ನು ಅಧ್ಯಯನ ಮಾಡಿದಾಗ ಅಂಬೇಡ್ಕರ್ ಅವರು ಎಲ್ಲಾ ಕಾಲಘಟ್ಟಕ್ಕೂ ಸಮಗ್ರವಾಗಿ ಅನ್ವಯವಾಗುವವರಾಗಿದ್ದಾರೆ. ಇವರ ಚಿಂತನ, ಮಂಥನ, ಜೀವಪರ ಹಾಗೂ ಮಾನವಪರ ಮೌಲೀಕ ತತ್ವಗಳು ಅಸಮಾನತೆಯ ಸಮಾಜದಲ್ಲಿ ಮಾನವೀಯತೆಯನ್ನು ನೆಲೆಗೊಳಿಸಲು ಇಂದಿಗೂ ಅತ್ಯಗತ್ಯವಾಗಿವೆ.

'ಅಸ್ಪೃಶ್ಯರ ವಿಮೋಚನೆ ನನ್ನ ಜನ್ಮಸಿದ್ಧ ಹಕ್ಕು' ಎಂದು ಘೋಷಿಸಿ ತಮ್ಮ ಜೀವನ ಪೂರ್ತಿ ವಿಮೋಚನೆ ಹಾಗೂ ಪರಿವರ್ತನೆಗಾಗಿ ಹೋರಾಟ ನಡೆಸಿದವರು ಅಂಬೇಡ್ಕರ್ ಅವರು. ಇಂಥ ಮಹಾನ್ ಮಾನವತಾವಾದಿಯ ಬದುಕು ಮತ್ತು ಹೋರಾಟ ಜೀವನದ ಅರಿವು ಪ್ರತಿಯೊಬ್ಬ ಭಾರತೀಯನಿಗೂ ಅತ್ಯಗತ್ಯ. ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿದ ಭೀಮ ಬಾಲ್ಯದಲ್ಲಿ ಅನುಭವಿಸಿದ ನೋವುಗಳು ಹೇಳತೀರದಷ್ಟು. ಭಾರತೀಯ ವೈದಿಕ ಸಾಂಪ್ರದಾಯಿಕ ಸಮಾಜವು ಚರ್ತುವರ್ಣ ಪದ್ಧತಿಯನ್ನು ಅನುಸರಿ, ಅಸ್ಪೃಶ್ಯರು ಎಂಬ ಒಂದೇ ಕಾರಣದಿಂದ ತನ್ನನ್ನು ತನ್ನ ಜನಾಂಗದವರನ್ನು ನಡೆಸಿಕೊಳ್ಳುವ ರೀತಿ ಅತ್ಯಂತ ಅಮಾನವೀಯ ಹಾಗೂ ಶೋಚನೀಯವಾಗಿತ್ತು. ಅಸ್ಪೃಶ್ಯ ಹುಡುಗನೆಂದು ತಿಳಿದ

ಗಾಡಿಯವನು ಗಾಡಿಯಿಂದ ಅಂಬೇಡ್ಕರ್ ಅವರು ಮತ್ತು ಅವರ ಅಣ್ಣನನ್ನು ಕೆಳಗೆ ಇಳಿಯುವಂತೆ ಹೇಳಿ ಅವಮಾನಿಸಿದ್ದು, ಬಾಯಾರಿಕೆಯಾಗಿ ಗಂಟಲು ಒಣಗಿದಾಗ ಸಾರ್ವಜನಿಕ ನೀರಿನ ಆಸರೆಯಲ್ಲಿ ನೀರು ಕುಡಿಯಲು ಹೋದಾಗ ಅಸ್ಪೃಶ್ಯನೆಂದು ತಿಳಿದು ನೀರು ಕೊಡದೆ ಮೇಲ್ಜಾತಿಯ ಜನರು ಅವರನ್ನು ಥಳಿಸುವುದು. ಕ್ಷೌರಿಕನು ಅಸ್ಪೃಶ್ಯರ ತಲೆಕೂದಲನ್ನು ಕತ್ತರಿಸುತ್ತಿರಲಿಲ್ಲವಾದ್ದರಿಂದ, ಭೀಮನ ಅಕ್ಕಂದಿರೇ ತಮ್ಮ ಸಹೋದರರ ತಲೆ ಕೂದಲನ್ನು ಕತ್ತರಿಸುತ್ತಿದ್ದರು.

ಅಸ್ಪೃಶ್ಯತೆಯ ಕಳಂಕವು ಶಾಲೆಯಲ್ಲಿ ಸಹಾ ಎಲ್ಲರೊಂದಿಗೆ ಕುಳಿಸುತ್ತಿರಲಿಲ್ಲ. ಹಾಗಾಗಿ, ಭೀಮ ಮತ್ತು ಇವರ ಅಣ್ಣ ಬಲರಾಮ ಮನೆಯಿಂದ ಗೋಣಿ ಚೀಲವೊಂದನ್ನು ತೆಗೆದುಕೊಂಡು ತರಗತಿಯ ಮೂಲೆಯಲ್ಲಿ ಕುಳಿತು ಪಾಠಕೇಳಬೇಕಾಗಿತ್ತು. ಕಪ್ಪು ಹಲಗೆಯ ಮೇಲೆ ಭೀಮ ಬರೆಯಲು ಹೋದಾಗ ಹುಡುಗರೆಲ್ಲ ಆ ಕರಿಹಲಗೆಯ ಹಿಂದೆ ಇಟ್ಟಿದ್ದ ತಮ್ಮ ಊಟದ ಡಬ್ಬಿಗಳನ್ನು ತೆಗೆದುಕೊಂಡು ಬೇರೆ ಕಡೆಗೆ ಹಾಕಿದರು. ಹೀಗೆ, ಮೇಲಿಂದ ಮೇಲೆ ಮೇಲುವರ್ಗದವರಿಂದ ಶೋಷಣೆಯನ್ನು ಅನುಭವಿಸಿದ ಭೀಮನಿಗೆ ಓದುವುದರಲ್ಲಿ ತೊಂದರೆಯಾಗುತ್ತಿತ್ತು. ಆದರೂ ಕೂಡ ಓದಿನಲ್ಲಿ ಮನಸ್ಸನ್ನು ಕೇಂದ್ರೀಕರಿಸಿಕೊಂಡು, ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದುಕೊಳ್ಳುವ ಮೂಲಕ ಉತ್ತೀರ್ಣರಾದರು. ಮುಂದೆ, ಬರೋಡಾ ಸಂಸ್ಥಾನದ ಮಾನವೀಯ ಅಂತಃಕರಣದ ಸಾಕಾರಮೂರ್ತಿ ಮಹಾರಾಜರಾದಂಥ ಸಯ್ಯಾಜಿರಾವ್ ಗಾಯಕ್‌ವಾಡ ಅವರು ನೀಡಿದಂಥ ವಿದ್ಯಾರ್ಥಿವೇತನದ ನೆರವಿನಿಂದಾಗಿ ವಿದ್ಯಾಭ್ಯಾಸವು ಯಾವುದೇ ಅಡ್ಡಿ ಅಂತಕವಿಲ್ಲದೆ ನಿರಾದಾಯಕವಾಗಿ ಮುಂದುವರಿಸಿದರು.

ಅಸ್ಪೃಶ್ಯರ ಉದ್ಧಾರಕ್ಕಾಗಿ ಹೋರಾಡಿದರು ಹಾಗೂ ಅದಕ್ಕಾಗಿಯೇ ತಮ್ಮ ಜೀವಮಾನವನ್ನೇ ಮುಡುಪಾಗಿಟ್ಟರು. 1927ರಲ್ಲಿ ಮಹಾಡ್‌ನಗರದ ಚಾಡರ್ ಕೆರೆಗೆ ಅಸ್ಪೃಶ್ಯರನ್ನೂ ಒಳಗೊಂಡು ಅಂಬೇಡ್ಕರ್ ಅವರ ನೇತೃತ್ವದಲ್ಲಿ ಕೆರೆಯಲ್ಲಿ ಇಳಿದು, ಬೊಗಸೆ ತುಂಬಾ ನೀರನ್ನು ಕುಡಿದು, ತಮ್ಮ ಹಕ್ಕನ್ನು ಸ್ಥಾಪಿಸಿ ಇತಿಹಾಸವನ್ನು ಸೃಷ್ಟಿಸಿದರು. 1930ನೇ ಮೇ 6 ರಂದು ಗಾಂಧೀಜಿಯವರು ದಂಡಿಯಾತ್ರೆಯನ್ನು ಕೈಗೊಂಡಿದ್ದರು. ಅದೇ ಸಮಯದಲ್ಲಿ ಅಂಬೇಡ್ಕರ್ ಅವರು 'ನಾಸಿಕ್'ನಲ್ಲಿ ತಮ್ಮ ದೇವಾಲಯದ ಪ್ರವೇಶವನ್ನು ಕುರಿತ ಸಾಮಾಜಿಕ ಚಳವಳಿಯನ್ನು ಪ್ರಾರಂಭಿಸಿದರು. ಸುಮಾರು ಒಂದು ತಿಂಗಳವರೆಗೆ ನಡೆದ ಈ ಸತ್ಯಾಗ್ರಹ ಅಸ್ಪೃಶ್ಯರಿಗೂ ಸವರ್ಣೀ ಜಾತಿಹಿಂದೂಗಳಿಗೂ ರಾಜಿಯಾಗಿ ಎರಡು ಕಡೆಯವರು ರಥವನ್ನು ಎಳೆಯುವುದೆಂದೂ ತೀರ್ಮಾನಿಸಲಾಯಿತು.ಮುಂದೆ 1930–32ರ ಸಮಯದಲ್ಲಿ ಬಹಿಷ್ಕೃತ ಹಿತಕಾರಿಣಿ ಸಭಾದ ಪ್ರತಿನಿಧಿಯಾಗಿ ಬ್ರಿಟಿಷ್‌ನಲ್ಲಿ ಭಾರತಕ್ಕೆ ಸ್ವಯಂ ಆಡಳಿತ ಸರ್ಕಾರವನ್ನು ನೀಡುವ ಸಲುವಾಗಿ ಆಯೋಜಿಸಲಾಗಿರುವ ದುಂಡು ಮೇಜಿನ ಸಮ್ಮೇಳನಗಳಲ್ಲಿ ಭಾಗವಹಿಸಲು ಆಹ್ವಾನ ಬಂದಿರುತ್ತದೆ.

ಅಂಬೇಡ್ಕರ್ ಅವರು ಈ ಮಹಾಸಭೆಯಲ್ಲಿ ಅಸ್ಪೃಶ್ಯರ ದಮನಿತ ಬದುಕನ್ನು ವಿಶ್ವಕ್ಕೆ ತಿಳಿಸುವಂಥ ಹಾಗೂ ಸಮಾಲೋಚನೆ ಮಾಡುವಂತಹ ಅವಕಾಶವನ್ನು ಒದಗಿಸಿತ್ತು. ಇಲ್ಲಿ ಬ್ರಿಟಿಷ್ ಸರ್ಕಾರ ಹಾಗೂ ಗಾಂಧೀಜಿ ಜೊತೆಗೆ ಮುಖ–ಮುಖಿಯಾಗಿ ಶತಶತಮಾನಗಳಿಂದ ಶೋಷಿತರಿಗೆ ನಿರಾಕರಿಸಲಾಗಿರುವ ಹಕ್ಕುಬಾಧ್ಯತೆಗಳನ್ನು ಯಾವುದೇ ಅರ್ಹತೆ ಹಾಗೂ ತಾರತಮ್ಯದ ಮಾನದಂಡಗಳನ್ನು ವಿಧಿಸದೇ ನೀಡಬೇಕು ಎಂಬ ಪ್ರಬಲವಾಗಿ ಪ್ರತಿಪಾದಿಸುವ ಮೂಲಕ ಮಾನವೀಯ ಹಕ್ಕುಗಳನ್ನು ಎತ್ತಿಹಿಡಿದಿದ್ದಾರೆ. ಈ ಸಮಯದಲ್ಲಿ ಅಂಬೇಡ್ಕರ್ ಅವರು ಮಾಡಿದ ಭಾಷಣದಲ್ಲಿ 'ತಾವು ಗುಲಾಮಗಿರಿಗಿಂತ ಅತ್ಯಂತ ಕೆಳಮಟ್ಟದಲ್ಲಿ ಜೀವನ ಮಾಡುತ್ತಿರುವ, ಬ್ರಿಟಿಷ್ ಭಾರತೀಯರ ಜನಸಂಖ್ಯೆಯ ಐದನೇಯ ಒಂದು ಭಾಗದ ಜನರ ಅಂದರೆ, ಇಂಗ್ಲೆಂಡಿನ ಅಥವಾ ಫ್ರಾನ್ಸಿನ ಜನಸಂಖ್ಯೆಯಷ್ಟು ಜನರ ಅಭಿಪ್ರಾಯವನ್ನು ಮುಂದಿಡುತ್ತಿರುವುದಾಗಿ ಘೋಷಿಸಿದರು. ಅವರ ಶಕ್ತಿಯುತವಾದ ಭಾಷಣವು ಬ್ರಿಟನ್ನಿನ ಹೆಸರಾಂತ ವೃತ್ತ ಪತ್ರಿಕೆಗಳ ಮೇಲೆ ಪ್ರಚಂಡ ಪರಿಣಾಮ ಬೀರಿರುವುದನ್ನು ಈ ಸಂದರ್ಭದಲ್ಲಿ ಗಮನಿಸಬಹುದಾಗಿದೆ.

ಬ್ರಿಟಿಷರು 'ಸ್ವಯಂ ಆಡಳಿತ'ವನ್ನು ಒದಗಿಸುವ ಭಾರತದ ರಾಜ್ಯಾಂಗದಲ್ಲಿಯ ನಿಮ್ನವರ್ಗದ ಜನಸಮುದಾಯದವರನ್ನು ಕಾಪಾಡುವುದರ ಸಲುವಾಗಿ ರಾಜಕೀಯ 'ರಕ್ಷಣೋಪಾಯಗಳ ಯೋಜನೆ' ಎಂಬ ಯೋಜನೆಯ ಅಡಿಯಲ್ಲಿ ಶೋಷಿತವರ್ಗಗಳ ಸಾಂಸ್ಕೃತಿಕ, ಧಾರ್ಮಿಕ ಹಾಗೂ ಆರ್ಥಿಕ ಹಕ್ಕುಗಳ ರಕ್ಷಣೆಯ ಬಗೆಗೆ ಮೂಲಭೂತ ಹಕ್ಕುಗಳು ಘೋಷಣೆಯನ್ನು ತಯಾರಿಸಿದ್ದರು. ಮೂಲಭೂತ ಹಕ್ಕುಗಳ ಘೋಷಣೆಯು ಅಸ್ಪೃಶ್ಯತೆಯನ್ನು ನಿವಾರಿಸಿ, ಈಗ ಇರುವ ಯಾವುದೇ, ದಂಡನೆ, ಅನಾನುಕೂಲತೆ, ಅನರ್ಹತೆ ಅಥವಾ ಕಾನೂನಿನ ಬೇಧವನ್ನು ನಿಲ್ಲಿಸಿ, ದೇಶದ ಇತರ ನಾಗರಿಕರೊಂದಿಗೆ ಸಮಾನವಾದ ಸಮನಾಗರಿಕತ್ವದ ಹಕ್ಕುಗಳನ್ನು ದಲಿತ ವರ್ಗಗಳಿಗೆ ಕೊಡತಕ್ಕದೆಂಬುದೂ ಹೇಳಿತ್ತು. ಶಾಸಕ ಸಮಿತಿಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವನ್ನು ಪ್ರತ್ಯೇಕ ಮತದಾನ ಪದ್ಧತಿಯಿಂದ ತನ್ನ ಪ್ರತಿನಿಧಿಗಳನ್ನು ಆರಿಸುವಂತಹ ಹಕ್ಕನ್ನು ಅಂದು ಕೇಳಲಾಗಿತ್ತು.

ಮತ್ತೆ, ನಿಮ್ನವರ್ಗದವರಿಗೆ, ಸರ್ಕಾರಿ ಉದ್ಯೋಗಗಳಲ್ಲಿ ನ್ಯಾಯವಾದ ಮತ್ತು ಸಾಕಷ್ಟು ಪ್ರಾತಿನಿಧ್ಯವನ್ನು ಕೊಟ್ಟು ಅವರನ್ನು ಉದ್ಯೋಗಗಳಿಗೆ ತೆಗೆದುಕೊಳ್ಳುವುದಕ್ಕೆ ಲೋಕಸೇವಾ ಆಯೋಗವೊಂದನ್ನು ಸ್ಥಾಪಿಸಬೇಕೆಂದು ಕೇಳಿದ್ದಾರೆ. ತಮ್ಮ ಈ ಬೇಡಿಕೆಗಳನ್ನು ವಿವೇಕಿಯುತ ರೀತಿಯಲ್ಲಿ ಒಪ್ಪದಿದ್ದರೆ ಭಾರತದ ಯಾವ ಸ್ವಯಂ ಆಡಳಿತ ರಾಜ್ಯಾಂಗಕ್ಕೂ ತಾವು ಒಪ್ಪುವುದಿಲ್ಲವೆಂದು ಅಲ್ಪಸಂಖ್ಯಾತರ ಉಪಸಮಿತಿಯಲ್ಲಿ ಅಲ್ಪಸಂಖ್ಯಾತರು ಮತ್ತು ನಿಮ್ನವರ್ಗದವರು ಸ್ಪಷ್ಟವಾಗಿ ತಿಳಿಸಿದ್ದಾರೆ.

ಹೀಗೆ, ಅಂಬೇಡ್ಕರ್ ಅವರು ತಮ್ಮ ಜನಸಮುದಾಯಗಳ ಪರಿಹಾರಕ್ಕಾಗಿ ಹಾಗೂ ಕಲ್ಯಾಣಕ್ಕಾಗಿ ಹಗಲು–ರಾತ್ರಿ ಎನ್ನುವುದನ್ನೇ ಲೆಕ್ಕಿಸದೇ ದುಡಿಯುತ್ತಿದ್ದರು. ಸಂದರ್ಶಗಳನ್ನು ಮಾಡುತ್ತಿದ್ದರು. ಅವರ ಏಕೈಕ ಉದ್ದೇಶವೆಂದರೆ, ಭಾರತದಲ್ಲಿ ಯುಗಯುಗಗಳಿಂದ ನಿಮ್ನವರ್ಗಗಳು ನರಳುತ್ತಿರುವುದನ್ನು,

ಸಹಿಸಲಾಗದ ಅವಮಾನಗಳನ್ನು ಮತ್ತು ಅವರು ಅನುಭವಿಸುತ್ತಿದ್ದ ನಂಬಲಾಗದ ಯಾತನೆಗಳನ್ನು ಹೊರಗಳೆಯುವುದೇ ಆಗಿತ್ತು. ಈ ಸಂದರ್ಭದಲ್ಲಿ ವಿಶ್ವದ ಅತೀ ದೊಡ್ಡ ರಾಜಕೀಯ ಶಕ್ತಿಯಾಗಿರುವ ಬ್ರಿಟಿಷ್ ಸರ್ಕಾರವನ್ನು ಮಾನವೀಯ ಹಕ್ಕು ಬಾದ್ಯತೆಗಳನ್ನು ಕೇಳುವಲ್ಲಿ ನಿಮ್ನವರ್ಗದವರ ಅದ್ವೀತಿಯ ನಾಯಕರಾಗಿ ಶ್ರಮಿಸಿದರು.

ಅಂಬೇಡ್ಕರ್ ಅವರು ಬ್ರಿಟಿಷರ ವಿರುದ್ಧ ಸೆಣಸಾಡಿ ಪಡೆದುಕೊಂಡಿದ್ದ ಪ್ರತ್ಯೇಕ ರಾಜಕೀಯ ಚುನಾಯಿತವನ್ನು ವಿರೋಧಿಸಿ ಗಾಂಧೀ ಮಹಾತ್ಮರು ಪೂನಾದ ಯರವಾಡ ಕಾರಾಗೃಹದಲ್ಲಿ ಅಮರಣಾಂತರ ಉಪವಾಸ ಸತ್ಯಾಗ್ರಹಕ್ಕೆ ಕುಳಿತಿರುವುದರ ಪರಿಣಾಮದಿಂದ ಆ ಪ್ರತ್ಯೇಕ ಮತದಾನದ ಹಕ್ಕನ್ನು ಸಹ ಈ ಗಾಂಧೀ ಕಸಿದುಕೊಂಡಿರುತ್ತಾರೆ. ಇದರಿಂದ ನೊಂದಂತಹ ಅಂಬೇಡ್ಕರ್ ಅವರು "ನಾನು ಬ್ರಿಟಿಷ್‌ರ ಜೊತೆಗೆ ಹೋರಾಟ ಮಾಡಿ ರಾಜಕೀಯ ಅಸ್ತ್ರವೆಂಬ ಒಂದು ರಸಭರಿತವಾದ ಹಣ್ಣನ್ನು ತಂದಿದ್ದೆ. ಆದರೆ, ಗಾಂಧೀ ಮಹಾತ್ಮರು ಅದನ್ನು ಕೀತ್ತುಕೊಂಡು, ಅದರ ರಸವನ್ನು ತಾವೇ ಕುಡಿದು ಬರೀ ಸಿಪ್ಪೆಯನ್ನು ನಿಮ್ನವರ್ಗದವರ ಮುಖಕ್ಕೆ ಎಸೆದಿದ್ದಾರೆ" ಎಂದಿರುವುದನ್ನು ಸಹ ಕಾಣಬಹುದು.

ಒಮ್ಮೆ ಗಾಂಧೀಜಿ ಅವರನ್ನು ಭೇಟಿ ಮಾಡಿರುವಂತಹ ಅಂಬೇಡ್ಕರ್ ಅವರು 'ಬ್ರಿಟಿಷರು ಹೃದಯ ಪರಿವರ್ತನೆ ತೋರಿಸುತ್ತಿಲ್ಲವೆಂದು ಹೇಳುತ್ತೀರಿ. ಹಿಂದೂಗಳು ನಮ್ಮ ಸಮಸ್ಯೆಗಳ ಬಗ್ಗೆ ಹೃದಯ ಪರಿವರ್ತನೆಯನ್ನು ತೋರುವವರೆಗೂ ನಾವು ಕಾಂಗ್ರೇಸ್ಸನ್ನಾಗಲೀ, ಹಿಂದೂಗಳನ್ನಾಗಲೀ ನಂಬುವುದಿಲ್ಲ. ಏಕೆಂದರೆ, ನಾವು ಸ್ವಸಹಾಯ ಹಾಗೂ ಆತ್ಮಗೌರವಗಳಲ್ಲಿ ವಿಶ್ವಾಸವಿಟ್ಟಿದ್ದೇವೆ. ಮಹಾನ್ ಮುಂದಾಗಳಲ್ಲಿಯೂ, ಮಹಾತ್ಮರಲ್ಲಿಯೂ ನಾವು ವಿಶ್ವಾಸವನ್ನು ಇಡಲು ಸಿದ್ಧರಿಲ್ಲ" ಎಂದು ಹೇಳಿರುವುದನ್ನು ಕಾಣಬಹುದಾಗಿದೆ.ಹಾಗೆಯೇ, ಮುಂದೆ ಮಾತನಾಡುತ್ತಾ, ಅಂಬೇಡ್ಕರ್ ಅವರು 'ನನಗೆ ನನ್ನದೇ ಆದಂತಹ ಮಾತೃಭೂಮಿಯೆಂಬುದೇ ಇಲ್ಲ. ನಮ್ಮನ್ನು ಬೆಕ್ಕು, ನಾಯಿಗಳಿಗಿಂತ ಕೀಳಾಗಿ ಕಂಡು ನಮಗೆ ಕುಡಿಯಲು ನೀರು ಸಹಾ ಸಿಗದಂತೆ ಮಾಡಿರುವ ಈ ವೈದಿಕ ಧರ್ಮ ನನ್ನದೆಂದು, ಈ ನೆಲ ನನ್ನ ತಾಯಿನಾಡು ಎಂದು ಹೇಗೆ ಹೇಳಲಿ? ಯಾವ ಆತ್ಮಗೌರವವುಳ್ಳ ಅಸ್ಪೃಶ್ಯನು ಸಹಾ ಈ ನೆಲದ ಬಗೆಗೆ ಹೆಮ್ಮೆಪಡುವುದಿಲ್ಲ' ಎಂದಿದ್ದಾರೆ. ಮುಂದೆ, 'ಪೂನಾ ಒಪ್ಪಂದಕ್ಕೆ' ಸಹಿ ಮಾಡಿದರು. ಪ್ರತ್ಯೇಕ ಮತದಾನದಿಂದ ರಾಷ್ಟ್ರದ ಹಿತಾಸಕ್ತಿಗೆ ಯಾವುದೇ ರೀತಿಯ ಹಾನಿಯಾಗುವುದಿಲ್ಲವೆಂಬ ಬಗೆಗೆ ಸಂಪೂರ್ಣವಾಗಿ ನಂಬಿಕೆಯಿದ್ದರೂ ಗಾಂಧೀ ಮಹಾತ್ಮರ ಪ್ರಾಣವನ್ನು ಉಳಿಸುವ ಸಲುವಾಗಿ ಪೂನಾ ಒಪ್ಪಂದಕ್ಕೆ ತಮ್ಮ ಸಹಿಯನ್ನು ಹಾಕಿದ್ದರು. ಈ ಮತಾಂದ ವೈದಿಕರನ್ನು ಎಚ್ಚರಿಸುತ್ತಾ, ಹಾಗೇನಾದರೂ ಒಪ್ಪಂದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡಲ್ಲಿ ಅವರಿಗೆ ಶೋಷಿತರಿಂದ ಬಹುದೊಡ್ಡ ಅಪಾಯ

ಕಾದಿರುತ್ತದೆಯೆಂದು ಎಚ್ಚರಿಕೆ ನೀಡಿದರು. ಆದುದ್ದರಿಂದ ***'ಬ್ರಿಟಿಷರಿಂದ ಪಡೆದಿದ್ದ ಅಸ್ಪೃಶ್ಯರ ರಾಜಕೀಯ ಶಕ್ತಿಯು ಪೂನಾದ ಯರವಾಡ ಜೈಲಿನಲ್ಲಿ ಬದಲಾಯಿತು'*** ಎಂದು ಹೇಳಿದರೆ ಬಹುಶಃ ತಪ್ಪಾಗಲಾರದು.

ಈ ಎಲ್ಲಾ ಅಮಾನವೀಯ ಹಾಗೂ ಅಸಮಾನತೆಗಳಿಂದ ಮನನೊಂದಿರುವ ಅಂಬೇಡ್ಕರ್ ಅವರು 1935ನೇ ಅಕ್ಟೋಬರ್‌ನಲ್ಲಿ 'ಇಯೋಲಾ' ಸಮ್ಮೇಳನದಲ್ಲಿ ಮತಾಂತರ ಘೋಷಣೆ ಮಾಡಲಿರುವರೆಂಬ ಬಿರುಗಾಳಿಯನ್ನೆಬ್ಬಿಸಿತು. ಆ ಸಮ್ಮೇಳನದಲ್ಲಿ ಮಾತಾನಾಡುತ್ತಾ, ಅಂಬೇಡ್ಕರ್ ಅವರು ಬಲು ಎತ್ತರದ ಧ್ವನಿಯಲ್ಲಿ 'ಹಿಂದೂ ಧರ್ಮವನ್ನು ಬಿಟ್ಟು ಬೇರೆ ಧರ್ಮದಲ್ಲಿ ಮುಕ್ತಿಯನ್ನು ಆತ್ಮಗೌರವವನ್ನು ಪಡೆಯಿರಿ' ತಮ್ಮ ಬಗ್ಗೆ ಮಾತಾನಾಡುತ್ತಾ, ಅವರು 'ದುರಾದೃಷ್ಟವಶಾತ್ ಅಸ್ಪೃಶ್ಯ ಹಿಂದೂವಾಗಿ ಹುಟ್ಟಿದ್ದೇನೆ. ಆದರೆ, ನಾನು ಹಿಂದೂವಾಗಿಯೇ ಸಾಯುವುದಿಲ್ಲ' ಎಂದು ಸಿಂಹ ಘರ್ಜನೆಯಿಂದ ಗುಡುಗಿದರು. ಈ ರೀತಿ ಗುಡುಗಿ ಸುಮ್ಮನೆ ಕುಳಿತುಕೊಳ್ಳುವ ಜಯಮಾನವೇ ಇರದಲ್ಲ. ಇದಕ್ಕೆ ಪ್ರತಿಯಾಗಿ ಸತತ 21 ವರ್ಷಗಳ ಕಾಲ ವಿಶ್ವದ ಹಲವಾರು ಧರ್ಮಗಳನ್ನು ಅಭ್ಯಾಸಿಸಿ ನಂತರ ಬೌದ್ಧಧರ್ಮಕ್ಕೆ ಹಿಂತಿರುಗಿದರು. ಇದನ್ನೇ ಮರಳಿ ಮನೆಗೆ... ಬುದ್ಧನೆಡೆಗೆ ಎಂದೇ ಹೇಳಬಹುದು.

ಅಂಬೇಡ್ಕರ್ ಅವರು ಧರ್ಮಾಂತರವಾಗುವ ಬಗ್ಗೆ ಹೇಳಿದ ನಂತರ ಧರ್ಮಗಳ ಬಗೆಗೆ ಅಧ್ಯಯನ ಮಾಡುವಲ್ಲಿ ನಿರತವಾಗಿರುತ್ತಾರೆ. ಧರ್ಮದ ಹೆಸರಿನಲ್ಲಿ ಹಾಗೂ ಅದರ ಚೌಕಟ್ಟಿನಲ್ಲಿ ರೂಪಿತವಾದ ಚರ್ತುವರ್ಣ ವ್ಯವಸ್ಥೆಯ ಅನಂತರ ಮಾನವನ ನಡುವೆ ಗೋಡೆಗಳನ್ನು ನಿರ್ಮಿಸಿತು. ವರ್ಗಗಳಾಗಿ ಒಡೆದು ಹೋದ ಜನರನ್ನು ಈ ವೈದಿಕ ಧರ್ಮದ ಸಂಪ್ರದಾಯವಾದಿಗಳು ಅದೇ ಸ್ಥಿತಿಯಲ್ಲಿ ಮುಂದುವರಿಸಿದವು. ಚರ್ತುವರ್ಣ ವರ್ಗಕ್ಕೆ ಸೇರಿದ ಇನ್ನೊಂದು ಜನಾಂಗ ಇವುಗಳ ಒಟ್ಟಿಗೆ ಹುಟ್ಟಿಕೊಂಡಿತ್ತು.ಅದೇ ಅಸ್ಪೃಶ್ಯರಾಗಿ, ಈ ಐದನೇಯ ವರ್ಗವನ್ನೇ ಮತಮೌಢ್ಯ ಮನಸ್ಸಿನವರು ಪ್ರಾಣಿಗಳಿಗಿಂತಲು ಹೀನಾಯವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಈ ತರಹವಾದಂತಹ ಮನುಷ್ಯ ಭೇದಗಳಿಂದ ಭುಗಿಲೆದ್ದು ಹಿಂಸೆ, ದೌರ್ಜನ್ಯ, ಶೋಷಣೆ ಇನ್ನು ಮುಂತಾದ ಕ್ರೂರತನಗಳ ಅಂಧಕಾರಗಳಾಗಿರುತ್ತವೆ. ಈ ಬಗೆಯ ಮಾನವ ನಡವಳಿಕೆಗಳು ಮಾನವೀಯತೆಗೆ ವಿರೋಧವಾಗಿದ್ದು, ಮಾನವೀಯ ಮೌಲ್ಯಗಳನ್ನು ಸದಾ ಉಲ್ಲಂಘಿಸುತ್ತವೆ. ಅಂಬೇಡ್ಕರ್ ಅವರು ಇಂತಹ ಕ್ರೌರ್ಯತೆಗಳನ್ನು ವಿರೋಧಿಸುವ ಮೂಲಕ ಮಾನವಿಕ ಪ್ರತಿಭಟನೆಗಳನ್ನು ಮಾಡುವ ಮುಖೇನ ಹಾಗೂ ತಮ್ಮ ಮಾತುಗಳಂತೆ ಅವುಗಳನ್ನು ಸಾಕ್ಷಾತ್ ಬದುಕಿನ ಕಾರಣವಾಗಿ ಸಮಾಜದ ಮೇಲೆ ತಮ್ಮದೆ ಆದಂತಹ ಬಹುದೊಡ್ಡ ಪ್ರಭಾವವನ್ನು ಬೀರಿರುವುದು ಕಂಡುಬರುತ್ತದೆ. ಅಂಬೇಡ್ಕರ್ ಅವರು ಬುದ್ಧಗುರುವಿನ ಅಹಿಂಸಾ ಹಾಗೂ ಮಧ್ಯಮ ಮಾರ್ಗದ ತತ್ವಗಳನ್ನು ತಮ್ಮ ಜೀವಮಾನದಲ್ಲಿ ಕರಗತ ಮಾಡಿಕೊಂಡಿದ್ದಾರ ಪರಿಣಾಮವೇ, ಇವರು ಕೂಡ ಅಹಿಂಸಾ ತತ್ವವನ್ನು ಸಂವಿಧಾನಿಕ ಮೂಲಕವೇ ಮಾನವನ ಘನತೆಯನ್ನು ಎತ್ತಿಹಿಡಿದದ್ದು. ಹಾಗೆಯೇ, ಮಾನವ ಪರಿವರ್ತನೆಯ ಮಹಾ ಮಾದರಿಯಾಗಿದೆ.

ಭಾರತದಲ್ಲಿ ಆಚರಣೆಯ ರೂಪದಲ್ಲಿರುವ ಅಸ್ಪೃಶ್ಯತೆಯೂ ಮಾನವೀಯ ಮೌಲ್ಯಗಳನ್ನು ದಮನಿಸುವಂತಹ ಬಹು ಮುಖ್ಯವಾದ ಸಾಮಾಜಿಕ ಪದ್ಧತಿ ಇದಾಗಿದೆ. ಇದು ಮಾನವ ಕುಲಕ್ಕೆ ಅತ್ಯಂತ ಕಂಠಕ ಹಾಗೂ ಕಳಂಕಪ್ರಾಯವಾದುದು. ಒಬ್ಬ ಮನುಷ್ಯ ತನ್ನ ಜಾತಿಯ ಕಾರಣದಿಂದಲೇ ಇನ್ನೊಬ್ಬನನ್ನು ಮುಟ್ಟಬಾರದು ಹಾಗೂ ಮುಟ್ಟಿಸಿಕೊಳ್ಳಬಾರದು. ಅವನೊಟ್ಟಿಗೆ ಸಂಪರ್ಕವೂ ಸಲ್ಲದು ಎನ್ನುವುದೇ, ಅವೈಜ್ಞಾನಿಕವಾದುದು, ಅತ್ಯಂತ ನಿಕೃಷ್ಠ ಹಾಗೂ ಅಮಾನವೀಯವಾದುದು. ಭಾರತೀಯ ವೈದಿಕ, ಸಾಮಾಜಿಕ ವ್ಯವಸ್ಥೆಯ ಸಂದರ್ಭದಲ್ಲಿ ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟಿರುವ ಸಮುದಾಯಗಳು ಇತಿಹಾಸದಲ್ಲಿ ಸಾಮಾಜಿಕವಾಗಿ ಎಲ್ಲಾ ಕ್ಷೇತ್ರಗಳಿಂದಲೂ ವಂಚಿಸಲ್ಪಟ್ಟವರು. ಇದು ಈ ದೇಶದ ಕರಾಳ ಚರಿತ್ರೆಯಾಗಿದೆ.

ಅಂಬೇಡ್ಕರ್ ಅವರು ಸಾಮಾಜಿಕ ಬದುಕಿಗೆ ಪ್ರವೇಶವನ್ನು ಪಡೆಯುವ ಮೊದಲು 'ಅಸ್ಪೃಶ್ಯತೆ' ಎಂಬ ಕ್ರೂರತೆ ಅಮಾನವೀಯವಾದುದು ಹಾಗೂ ಮನುಷ್ಯ ವಿರೋಧಿಯಾದುದು ಎಂದು ಇಡೀ ಜಗತ್ತಿಗೆ ಗೊತ್ತಿರಲಿಲ್ಲ.ಇದು ಕೂಡ ಒಂದು ರೀತಿಯಲ್ಲಿ ಪಾಶ್ಚಿಮಾತ್ಯ ಕರಿಯರ ವರ್ಣಭೇದದಂತೆ ಇರಬಹುದು ಎಂಬುದು ಘೋಚರವಾಗಿತ್ತು. ಅದಕ್ಕೆ ಜಗತ್ತಿನ ಸ್ವರೂಪದಲ್ಲಿ ಭೀಕರ ಅನ್ನುವುದು ಬ್ರಿಟಿಷರು ಭಾರತೀಯರಿಗೆ ಸಂಪೂರ್ಣವಾದ ರಾಜ್ಯಾಧಿಕಾರವನ್ನು ನೀಡುವ ವಿಷಯವಾಗಿ ಲಂಡನ್‌ನಲ್ಲಿ ಆಯೋಜಿಸಲಾಗಿದ್ದಂತಹ ಅಂತರರಾಷ್ಟ್ರೀಯ ಸಮ್ಮೇಳನ ಎಂದೇ ಖ್ಯಾತಿ ಪಡೆದಿರುವ ದುಂಡುಮೇಜಿನ ಸಮ್ಮೇಳನದ ನಂತರವಷ್ಠೇ ಈ ಜಗತ್ತಿಗೆ ಗೊತ್ತಾಗಿದೆ. ಇಂತಹ ಕ್ರೌರ್ಯತೆಯನ್ನು ವಿಶ್ವದ ಸಮಸ್ತರಿಗೆ ಮನದಟ್ಟಾಗುವಂತೆ ಎಳೆಎಳೆಯಾಗಿ ಬಿಚ್ಚಿಟ್ಟಿದ್ದೆ ಅಂಬೇಡ್ಕರ್ ಅವರು.

ಅಂಬೇಡ್ಕರ್ ಅವರು ಸ್ವತಃ ಅಸ್ಪೃಶ್ಯತೆಯ ಜಗತ್ತಿನಿಂದಲೇ, ಬಂದದರಾಗಿದ್ದರಿಂದ ಅಸ್ಪೃಶ್ಯತೆಯ ಅಮಾನವೀಯತೆಯ ನೋವು ಅಪಮಾನಗಳನ್ನು ಕಂಡುಂಡವರಾಗಿದ್ದರಿಂದ ಹಾಗೂ ಜೀವಪರ ವೈಚಾರಿಕತೆಯನ್ನು ಮೈಗೂಡಿಸಿಕೊಂಡವರಾಗಿದ್ದರು. ಆದುದ್ದರಿಂದ ಕಾರಣ ಹಾಗೂ ಪರಿಣಾಮವಾಗಿ ತುಂಬು ಸ್ವಾಭಿಮಾನದಲ್ಲಿ ಜಾತಿಪದ್ಧತಿ, ಅಸ್ಪೃಶ್ಯತೆ ಇನ್ನು ಮುಂತಾದವು ಈ ಕಾರಣಗಳಿಂದಾಗಿ ವೈದಿಕ ಭಾರತದ ಅಮಾನವೀಯ ಆಚಾರ–ವಿಚಾರಗಳ ಬಗೆಗೆ ಸಾತ್ವಿಕ ನಿಟ್ಟಿನಿಂದ ಪ್ರಖರವಾದ ಮಾತುಗಳನ್ನು ಹಾಡಿರುತ್ತಾರೆ. ಮಾನವನ ಘನತೆ ಹಾಗೂ ಮಾನವಾಭಿವೃದ್ಧಿಗೆ ಅಸ್ಪೃಶ್ಯತೆ ಹಾಗೂ ಜಾತಿಪದ್ಧತಿ ಹೇಗೆ ತೊಡಕಾಗಿವೆ ಎಂಬುದನ್ನು ಸುದೀರ್ಘವಾಗಿ ವಿವರಿಸಿರುವುದನ್ನು ಕಾಣಬಹುದಾಗಿದೆ.

ಜಾತಿಪದ್ಧತಿ ಏಕೆ ಭಾರತದಲ್ಲಿ ಸರ್ವನಾಶವಾಗುತ್ತಿಲ್ಲ ಎಂಬುದಕ್ಕೆ ಅಂಬೇಡ್ಕರ್ ಅವರು ನೀಡಿರುವಂತಹ ವಿವರಣೆ ಏನೆಂದರೆ; 'ಜಾತಿಯ ನಿಯಮವನ್ನು ಮೀರುವವನಿಗೆ ಕೊಡುವಂತಹ ಶಿಕ್ಷೆ, ಬಹಿಷ್ಕಾರ. ಬಹಿಷ್ಕಾರಕ್ಕೆ ಒಳಗಾದ ವ್ಯಕ್ತಿ ತನ್ನ ಸಮೂಹದೊಟ್ಟಿಗೆ ಯಾವುದೇ ಸಂಬಂಧ ಇಟ್ಟುಕೊಳ್ಳುವಂತಿಲ್ಲ. ಇದು ಬದುಕಿಯೂ ಸತ್ತಂತೆ. ಈ ಬಹಿಷ್ಕಾರಕ್ಕೆ ಹೆದರಿಕೊಂಡೇ, ಅಸ್ಪೃಶ್ಯತೆ ಹಾಗೂ

ಜಾತಿಪದ್ಧತಿ ಸಂಪ್ರದಾಯಬದ್ಧವಾಗಿಯೇ ಉಳಿದಿವೆ’. ಜಾತಿಪದ್ಧತಿಯ ನಿರ್ಮೂಲನೆಯ ಕನಸು ಅಂಬೇಡ್ಕರ್ ಅವರದು. ಈ ಕುರಿತು ಅವರು ತಮ್ಮ ಬರಹಗಳು ಹಾಗೂ ಭಾಷಣಗಳು ಎಂಬ ಸಂಪುಟ ಒಂದರಲ್ಲಿ ‘ಜಾತಿ ನಿರ್ಮೂಲನೆ’ ಎಂಬ ಸುದೀರ್ಘವಾದ ಲೇಖನವನ್ನೇ ಬರೆದಿರುವುದನ್ನು ನೋಡಿದಾಗ ಹಾಗೂ ಓದಿ ಅರ್ಥೈಸಿಕೊಂಡಾಗ ಮಾತ್ರ ಇವರ ಕನಸ್ಸು ಏನಾಗಿತ್ತು ಎಂಬುದನ್ನು ತಿಳಿಯಬಹುದು.

ಅಂಬೇಡ್ಕರ್ ಅವರು ಜಾತಿನಿರ್ಮೂಲನೆಯ ಬಗೆಗೆ 1936ನೇ ಡಿಸೆಂಬರ್‌ನಲ್ಲಿ ಲಾಹೋರಿನ ಜಾತ್‌ಪತ್‌ತೋಡಕ್ ಮಂಡಲದ ವಾರ್ಷಿಕಸಮಾರಂಭದಲ್ಲಿ ಅಧ್ಯಕ್ಷೀಯ ಭಾಷಣ ಮಾಡಲು ತಯಾರಿಸಿದ ಪ್ರಬಂಧವಾಗಿದೆ. ಇದರಲ್ಲಿ ಕ್ರಾಂತಿಕಾರಿ ಚಿಂತನೆಗಳಿವೆ ಎಂದು ವಿವಾದಕ್ಕೆ ಕಾರಣವಾಗಿರುತ್ತದೆ. ಅಂಬೇಡ್ಕರ್ ಅವರ ಸುಪ್ರಸಿದ್ಧ ಭಾಷಣವು ಗಾಂಧೀಜಿಯಂತಹವರ ಗಮನವನ್ನು ಸೆಳೆಯಿತು. ಜಾತಿ ಹಿಂದೂ ಸುಧಾರಕರು ಪ್ರಜ್ಞಾವಂತ ಬುದ್ಧಿ ಜೀವಿಗಳಾಗಿದ್ದು, ಅವರು ಕಡ್ಡಾಯ ವಿದವಾ ಪದ್ಧತಿ, ಬಾಲ್ಯವಿವಾಹ ಮುಂತಾದ ಸಾಮಾಜಿಕ ಪಿಡುಗುಗಳ ನಿವಾರಣೆಗೆ ತಮ್ಮ ಕಾರ್ಯಕ್ಷೇತ್ರವನ್ನು ಸೀಮಿತಗೊಳಿಸಿದ್ದರು. ಆದರೆ, ಅವರು ಜಾತಿಗಳ ನಿರ್ಮೂಲನೆಗಾಗಿ ಚಳವಳಿಯ ಅವಶ್ಯಕತೆಯನ್ನು ಅರಿಯಲಿಲ್ಲ. ಮತ್ತೇ, ಜಾತಿಯ ವಿರುದ್ಧ ಚಳವಳಿ ಮಾಡುವ ಧೈರ್ಯವೂ ಅವರಿಗಿರಲಿಲ್ಲವೆಂಬುದು ಬಾಬಾಸಾಹೇಬ್ ಅಂಬೇಡ್ಕರ್ ಅವರ ಮನದಾಳದ ಅನಿಸಿಕೆಯಾಗಿತ್ತು.

ಅಂಬೇಡ್ಕರ್ ಅವರ ಪ್ರಕಾರ ಭಾರತದಲ್ಲಿ ರಾಜಕೀಯ ಕ್ರಾಂತಿಗೆ ಮೊದಲು ಸಂತರುಗಳ ನಾಯಕತ್ವದಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆಗಳು ಸಂಭವಿಸಿದವು ಎಂದಿದ್ದಾರೆ. ಆದರೆ, ಬ್ರಿಟಿಷರ ಆಳ್ವಿಕೆಯ ಸಂದರ್ಭದಲ್ಲಿ ರಾಜಕೀಯ ಸ್ವಾತಂತ್ರ್ಯ ಪ್ರಶ್ನೆ, ಸಾಮಾಜಿಕ ಸುಧಾರಣೆಯ ಮೇಲೆ ಆದ್ಯತೆ ಪಡೆದು, ಸಾಮಾಜಿಕ ಸುಧಾರಣೆಯ ಬಗ್ಗೆ ಅಲಕ್ಷ್ಯವನ್ನು ಮುಂದುವರಿಸಿದೆ. ಆದುದ್ದರಿಂದ ಸಮಾಜವಾದಿಗಳ ವಿಷಯದಲ್ಲಿ ಮಾತನಾಡುತ್ತಾ, ಸಮಾಜವಾದಿಗಳು ಕ್ರಾಂತಿಗೆ ಮುಂಚೆ ಅಥವಾ ಕ್ರಾಂತಿಯ ನಂತರವಾದರೂ ಈ ಜಾತಿಯ ಪೆಡಂಭೂತದ ವಿರುದ್ಧವಾಗಿ ಹೋರಾಡಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ. ಈ ಕಾರಣವಾಗಿ ಜಾತಿಯು ಶ್ರಮ ಅಥವಾ ದುಡಿಮೆಯ ವಿಭಜನೆಯನ್ನು ಆಧರಿಸಿಲ್ಲ ಎಂಬುದು ಅವರ ದೃಢ ಅಭಿಪ್ರಾಯವಾಗಿತ್ತು. ಅದು ಶ್ರಮಿಕರ ಅಥವಾ ಕಾರ್ಮಿಕರ ವಿಭಜನೆಯಾಗಿದೆ.

ಒಂದು ಆರ್ಥಿಕ ವ್ಯವಸ್ಥೆಯ ರೂಪದಲ್ಲಿಯೂ ಕೂಡ ಜಾತಿ ಒಂದು ಉಪದ್ರವಿ ವ್ಯವಸ್ಥೆಯಾಗಿದೆ. ಸಾಮಾಜಿಕ ಒಗ್ಗಟ್ಟಿಗೆ ಹಾಗೂ ಐಕ್ಯತೆಗೆ ಅಡ್ಡಿಯಾಗಿರುವ ಜಾತಿ ನಿರ್ಮೂಲನೆಗೆ ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಆದರ್ಶಗಳ ಆಧಾರದ ಮೇಲೆ ಮತ್ತು ಪ್ರಜಾಪ್ರಭುತ್ವ ತತ್ವಗಳಿಗೆ ಅನುಗುಣವಾದ ಹೊಸ ಸಾಮಾಜಿಕ ವ್ಯವಸ್ಥೆಯ ನಿರ್ಮಾಣಕ್ಕೆ ಕರೆಕೊಟ್ಟರು. ಅಂಬೇಡ್ಕರ್ ಅವರು ಈ ಸಮಸ್ಯೆಯ ಪರಿಹಾರಗಳಲ್ಲಿ ಒಂದಾದ ಅಂತರ ಜಾತಿ ವಿವಾಹವನ್ನು ಪ್ರತಿಪಾದಿಸಿದರು. ಶಾಸ್ತ್ರಗಳಲ್ಲಿರುವ ನಂಬಿಕೆಯೇ

ಜಾತಿಗಳನ್ನು ಉಳಿಸಿ ಬೆಳೆಸಿಕೊಂಡು ಬರುವುದಕ್ಕೆ ಮೂಲ ಕಾರಣವಾಗಿದೆ ಎಂದು ಒತ್ತಿಹೇಳಿದ್ದರು. ಅಸ್ಪೃಶ್ಯತೆಯನ್ನು ನಿವಾರಿಸುವ ಸಲುವಾಗಿ ಅವರು ಬೇರೆ ಬೇರೆ ಚಿಂತನೆಗಳನ್ನು ಗಂಭೀರವಾಗಿ ನಡೆಸುತ್ತಿದ್ದರು.ಅವರು ಬಳಸುವ ಮಾತು "ಪ್ರತಿಯೊಬ್ಬ ಸ್ತ್ರಿ–ಪುರುಷರನ್ನು ಶಾಸ್ತ್ರಗಳ ಗುಲಾಮಗಿರಿಯಿಂದ ಮುಕ್ತಗೊಳಿಸಿ, ಶಾಸ್ತ್ರಾಧಾರಿತ ವಿನಾಶಕಾರಿ ಭಾವನೆಗಳನ್ನು ಅವರುಗಳ ಮನಸ್ಸುಗಳಿಂದ ತೆಗೆದು ಹಾಕಿ ಅವರ ಮನಸ್ಸುಗಳನ್ನು ಶುದ್ಧಗೊಳಿಸಿದಾಗ ಮಾತ್ರ ಅವನಾಗಲೀ ಅಥವಾ ಅವಳಾಗಲೀ ಸಹ ಪಂಕ್ತಿ ಭೋಜನ ಹಾಗೂ ಅಂತರ್ಜಾತಿ ವಿವಾಹಕ್ಕೆ ಮುಂದಾಗುತ್ತಾರೆ" ಎಂದಿದ್ದಾರೆ.

ಅಂಬೇಡ್ಕರ್ ಅವರ ಪ್ರಕಾರ ಸಮಾಜವು ವೈಚಾರಿಕತೆಯ ಆಧಾರದ ಮೇಲೆ ಹೊಂದಿರಬೇಕೆ ಹೊರತು, ಜಾತಿಪದ್ಧತಿಯ ಕ್ರೂರ ಪರಂಪರೆಗಳನ್ನಲ್ಲ. ಇಲ್ಲಿ ಮುಖ್ಯವಾಗಿ ಶಾಸ್ತ್ರಗಳ ವಿರೋಧ ಯಾಕೆಂದರೆ, ಸಾಮಾಜಿಕವಾಗಿ ಇದನ್ನು ಪರಿವರ್ತನೆ ಎಂದು ಕರೆಯುವುದಿಲ್ಲ. ನಂತರ ಅವರು ರಾಜಕೀಯವಾಗಿ ತೊಡಗಿಸಿಕೊಂಡರೂ ಅಸ್ಪೃಶ್ಯತೆ ನಿವಾರಣೆಗೆ ಕಾನೂನುಗಳ ಬಗೆಗೆ ಗಮನಹರಿಸಿದರು. ಜಾತಿ ಹಿಂದೂಗಳು ಭಿನ್ನಭಿನ್ನವಾಗಿ ಸಹಕರಿಸಿರುವುದನ್ನು ಕಾಣಬಹುದು.'ಅಸ್ಪೃಶ್ಯತೆ' ಎಂಬ ಢೆಡಂಬೂತದ ಆಚರಣೆಯನ್ನು ಬಹುಮುಖ್ಯವಾಗಿ ಮಾನವೀಯತೆಯ ಉಲ್ಲಂಘನೆಯಾಗಿದ್ದು, ಇದು ಭಾರತೀಯ ನೆಲೆದಲ್ಲಿ ಮಾನಸಿಕ ಹಾಗೂ ದೈಹಿಕ ಹಿಂಸೆಗೆ ಕಾರಣವಾಗಿದೆ. ಹಾಗೆಯೇ, ಅಂಬೇಡ್ಕರ್ ಅವರು 'ಅಸ್ಪೃಶ್ಯತೆಯನ್ನು ಗುಲಾಮಗಿರಿಗಿಂತ ಕೆಟ್ಟದ್ದು ಮಾತ್ರವಲ್ಲದೆ, ಕ್ರೌರ್ಯದಿಂದ ಕೂಡಿರುವಂತಹದ್ದು' ಎಂದಿದ್ದಾರೆ. ಅಲ್ಲದೆ, ಅಸ್ಪೃಶ್ಯತೆಯ ಆಚರಣೆ ತನಗೆ ಪುಣ್ಯವನ್ನು ತಂದುಕೊಡುತ್ತದೆ. ಅದನ್ನು ಆಚರಿಸದಿದ್ದರೆ ಪಾಪ ಬರುತ್ತದೆ ಎಂಬುದು ಒಬ್ಬ ಮತಾಂದ ವೈದಿಕನು ಭಾವಿಸಿರುತ್ತಾರೆ. ಆ ಭಾವನೆ ಎಲ್ಲಿಯವರೆಗೆ ಇರುತ್ತದೋ, ಅಲ್ಲಿಯವರೆಗೆ ಅಸ್ಪೃಶ್ಯತೆ ಇರುತ್ತದೆ ಎಂಬುದೇ ನನ್ನ ಅಭಿಪ್ರಾಯ' ಎನ್ನುವುದು ಅಂಬೇಡ್ಕರ್ ಅವರ ಮನದಾಳದಿಂದ ಒಡಮೂಡಿದ ನಿಲುವಾಗಿದೆ. ಇಂತಹ ಆಚರಣೆಗಳ ನಂಬಿಕೆಗಳೇ ಅಮಾನವೀಯತೆಯನ್ನು ಪ್ರೇರೆಪಿಸುವ ಅಂಶಗಳಾಗಿವೆ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರು ಮನುಷ್ಯನ ಮಾನಸಿಕ ಪರಿವರ್ತನೆಯಿಂದೇ ಮಾತ್ರ ಬದಲಾವಣೆ ಸಾಧ್ಯವೆಂಬುದನ್ನು ಖಚಿತವಾಗಿ ನಂಬಿದ್ದರು.

ಅಂಬೇಡ್ಕರ್ ಅವರು ಅಸ್ಪೃಶ್ಯತೆ ಎಂಬುದು ಅಸ್ಪೃಶ್ಯರನ್ನಷ್ಟೇ ಗುಲಾಮರನ್ನಾಗಿಸಿಲ್ಲ. ಇಡೀ ಭಾರತೀಯರ ಮನಸ್ಸನ್ನೇ ಗುಲಾಮರನ್ನಾಗಿಸಿದೆ ಎಂದು ಹೇಳಿದ ಬಳಿಕ 'ಅಸ್ಪೃಶ್ಯತೆಯ ಸಮಸ್ಯೆ ವೈದಿಕರ ಸಾಮಾಜಿಕ ನಡವಳಿಕೆಯಿಂದ ನೇರವಾಗಿ ಉದ್ಭವಿಸಿರುವಂತಹದ್ದು. ಹಾಗಾಗಿ ಅಸ್ಪೃಶ್ಯತೆಯು ನಿರ್ನಾಮಗೊಳ್ಳುವುದು ಜಾತಿಹಿಂದೂ ವೈದಿಕರು ತಮ್ಮ ತಮ್ಮ ಮನಸ್ಥಿತಿಯನ್ನು ಬದಲಾಯಿಸಿಕೊಂಡಾಗ ಮಾತ್ರ ಎಂದಿದ್ದಾರೆ. ಅಲ್ಲದೆ, 'ಅಸ್ಪೃಶ್ಯತೆಯನ್ನು ತೊಡೆದು ಹಾಕುವುದು ಸವರ್ಣೀಯರೆನಿಸಿಕೊಂಡವರ ನೈತಿಕ ಜವಾಬ್ದಾರಿ ಎಂದು ಹೇಳಿರುವುದು ಬಹುಮುಖ್ಯವಾದ ಅಂಶವಾಗಿದೆ. ಅಂಬೇಡ್ಕರ್ ಅವರು

'ಅಸ್ಪೃಶ್ಯತೆಯ ಆಚರಣೆಯನ್ನು ಅಪರಾಧ' ಎಂದರೆ, ಗಾಂಧೀಜಿ 'ಅಸ್ಪೃಶ್ಯತೆಯ ಆಚರಣೆಯು ವಿಷ ಹಾಗೂ ಶಾಪ' ಎಂದಿದ್ದಾರೆ. ನಮ್ಮ ಭಾರತೀಯ ನವಸಂವಿಧಾನದ ಹದಿನೇಳನೆಯ ಅನುಚ್ಛೇದವು ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ನಿಷೇಧಿಸಿರುವುದು ಗಮನಾರ್ಹವಾದ ಸಂಗತಿಯಾಗಿದೆ. ಆದರೆ, ಜಾತಿಪದ್ಧತಿ ಬಗೆಗೆ ನಂಬಿಕೆ ಇಟ್ಟಿರುವವರು ದೇಶದ ಸಂವಿಧಾನದ ಬಗೆಗೆ ನಂಬಿಕೆ ಇಟ್ಟಿಲ್ಲವೆಂಬುದು ಸತ್ಯ. ಇದು ಮಾನವೀಯತೆಯನ್ನು ವಿರೋಧಿಸುವುದೇ ಆಗಿದೆ.

ಅಸ್ಪೃಶ್ಯತಾ ನಿರ್ಮೂಲನಾ ಕಾರ್ಯಕ್ರಮಗಳು ಭಾರತದಲ್ಲಿ ಬಹುಪಾಲು ವ್ಯಂಗ್ಯಕ್ಕೆ ಗುರಿಯಾಗುತ್ತವೆ.ಏಕೆಂದರೆ, ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಬಗೆಗೆ ಬಹುತೇಕ ಜಾಗೃತಿ ಸಭೆಗಳು ನಡೆಯುವುದು ದಲಿತರ ಕೇರಿಗಳಲ್ಲೇ. ಆದರಲ್ಲೂ ಅಸ್ಪೃಶ್ಯರು ವಾಸವಾಗಿರುವಂತಹ ಬೀದಿಗಳಲ್ಲಿ. ಆದರೆ, ಇಂತಹ ಕಾರ್ಯಕ್ರಮಗಳು ನಿಜವಾಗಿಯೂ ನಡೆಯಬೇಕಾಗಿರುವುದು, ಅಸ್ಪೃಶ್ಯತೆಯನ್ನು ಆಚರಿಸುವ, ಅನುಸರಿಸುವ ಬಗೆಗೆ ನಂಬಿಕೊಂಡಿರುವವರ ಊರುಕೇರಿಗಳಲ್ಲಿ. ಏಕೆಂದರೆ, ಅಸ್ಪೃಶ್ಯತೆಯನ್ನು ಆಚರಿಸುವವರಿಗೆ ಇದೊಂದು ಅಮಾನವೀಯ ಪದ್ಧತಿ, ಮಾನವೀಯತೆಗೆ ವಿರೋಧ ಎಂಬ ಪ್ರಜ್ಞೆಯನ್ನು ಮೂಡಿಸಿ ಪರಿವರ್ತನೆ ಮಾಡಬೇಕಾದ ಅಗತ್ಯವಿದೆ. ಆದುದ್ದರಿಂದ ಈ ಅರಿವು ಬಹಳ ಮುಖ್ಯವಾದುದು. ಆದರೆ, ಅಸ್ಪೃಶ್ಯತೆಯ ಕರಾಳತೆಗೆ ಒಳಗಾಗಿರುವ ಜನ ಸಮುದಾಯದವರಿಗೆ ಅಸ್ಪೃಶ್ಯತೆಯನ್ನು ನಿರ್ಮೂಲನೆಗೊಳಿಸುವ ಬಗೆಗೆ ವಾದ ಹೇಳಿದರೆ, ಅದರಿಂದ ಯಾವುದೇ ತರಹವಾದಂತಹ ಪ್ರಯೋಜನವಿಲ್ಲ.

ಅಂಬೇಡ್ಕರ್ ಅವರ ಅಂತರಾಳದ ಕಾಳಜಿ ಈ ಬಗೆಯದೇ ಆಗಿತ್ತು. ಇವರ ಹಾಗೂ ಇವರಂತಹ ಅನೇಕ ಮಾನವೀಯತೆಗಾಗಿ ತುಡಿದ ವ್ಯಕ್ತಿತ್ವಗಳ ಕಾರಣವಾಗಿಯೇ ಅಸ್ಪೃಶ್ಯತೆ ಎಂಬುದು ಈ ದೇಶದಲ್ಲಿ ಸ್ವಲ್ಪ ಹಾಗೂ ವಿನಾಶ ಹೊಂದಲು ಸಾಧ್ಯವಾಗಿದೆ. ಇಷ್ಟೆಲ್ಲದರ ನಡುವೆಯೂ ಭಾರತದಲ್ಲಿ ಅಸ್ಪೃಶ್ಯತಾ ನಿರ್ಮೂಲನದ ಅಲೆ ಹಾಗೂ ಅಸ್ಪೃಶ್ಯತಾ ಆಚರಣೆ ಬೂದಿಮುಚ್ಚಿದ ಕೆಂಡದಂತಿದೆ. ಇದಕ್ಕೆ ಪೂರಕವಾಗಿ ಕರ್ನಾಟಕದ ಪ್ರಾಥಮಿಕ ಶಾಲೆಗಳ ಬಿಸಿಯೂಟದ ಯೋಜನೆಯಲ್ಲಿ ಅಡುಗೆ ಮಾಡುವವರು ಅಸ್ಪೃಶ್ಯ ಜಾತಿಗೆ ಸೇರಿದವರಾಗಿದ್ದಾರೆ ಎನ್ನುವ ಏಕೈಕ ಕಾರಣಕ್ಕಾಗಿ ತೀವ್ರತರವಾದ ಪ್ರತಿಭಟನೆಯನ್ನು ಮಾಡಿದರು. ಹಲವಾರು ಕಡೆ ಅಡುಗೆ ಮಾಡುವಂತಹ ದಲಿತ ಸಿಬ್ಬಂದಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ, ಕಿರುಕುಳವನ್ನು ಕೊಟ್ಟಿದ್ದರು. ಇದು ಸಹ ಮಾನವೀಯತೆಯ ಬದಲು ಅಮಾನವೀಯತೆಯನ್ನು ಸೃಷ್ಟಿಸಿರುತ್ತದೆ. ಇಂತಹ ಘಟನೆ ನಡೆದಾಗ ದಲಿತರು ಮಾತ್ರ ಇದನ್ನು ವಿರೋಧಿಸಿದರೇ ಹೊರತು, ಇತರೇ ದಲಿತೇತರರು ಕಡಿಮೆ.

ದುರಂತವೆಂದರೆ, ಕರ್ನಾಟಕದ ಇತಿಹಾಸದಲ್ಲಿ 12ನೇ ಶತಮಾನವು ಸಮಾನತೆಯ ಆಗರವಾಗಿತ್ತು. ಏಕೆಂದರೆ, ಅಸ್ಪೃಶ್ಯತೆಯ ನಿರ್ಮೂಲನೆಗೆ ಪ್ರಾಮಾಣಿಕತೆಯಿಂದ ಹೋರಾಡಿದ ಬಸವೇಶ್ವರ

ಹೆಸರನ್ನು ಯಾರು ಹಗಲಿರುಳು ಭಜಿಸುವಂಥ ಮಠಮಾನ್ಯಗಳೂ, ಅದಕ್ಕೆ ಸಂಬಂಧಿಸಿದ ಮಠಾಧೀಶರೂ ಇದಕ್ಕೆ ಚಕಾರವೆತ್ತಲಿಲ್ಲ. ಇನ್ನು ವಿಚಿತ್ರವೆನೆಂದರೆ ಕೆಲವು ಕಡೆಗಳಲ್ಲಿ ಸರ್ಕಾರಿ ಶಾಲೆಗಳಿಗೆ ಈ ಮಠಗಳೇ, ಬಿಸಿಯೂಟವನ್ನು ವಿತರಿಸುತ್ತಿರುವುದು ಸಾರ್ವಜನಿಕರಿಗೆ ತಿಳಿದಿರುವಂತಹ ಮಹತ್ವ ಪೂರ್ಣವಾದ ಸಂಗತಿಯಾಗಿದೆ.ಅಸ್ಪೃಶ್ಯತಾಆಚರಣೆಯು ಬೃಹದಾಕಾರದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕಾಣಿಸಿಕೊಂಡಂತಹ ಸಂದರ್ಭದಲ್ಲಿ ಬಸವೇಶ್ವರರ ಹೆಸರನ್ನು ಬಳಸುವ ಹಾಗೂ ಹೇಳುವ ಮಠಗಳು ಇವರ ನೈಜವಾದ ಚಿಂತನ ಲಹರಿಗಳನ್ನು ಬಹು ಕಳಕಳಿಯಿಂದ ಗ್ರಾಮೀಣ ಜನಸಮುದಾಯಕ್ಕೆ ತಿಳಿಸಿ ಹೇಳಿದ್ದಾರೆ, ಒಂದಿಷ್ಟಾದರೂ ಪರಿವರ್ತನೆ ಆಗುವಂತಹ ಸಾಧ್ಯತೆ ಆಗುತ್ತಿತ್ತು.. ಆದರೆ, ಅಂತಹ ಮಹತ್ವದ ಅವಕಾಶವನ್ನು ನಿರ್ಲಕ್ಷಿಸುವ ಮುಖೇನ ಬಸವ ಅನುಯಾಯಿಗಳು ಸಾಂಪ್ರದಾಯಿಕ ನಂಬಿಕೆಯನ್ನೇಷ್ಟೇ ಬೆಂಬಲಿಸಿ ಉಳಿಸಿದಂತಾಯಿತು. ಅಸ್ಪೃಶ್ಯತಾ ಆಚರಣೆ ಸಂವಿಧಾನ ವಿರೋಧಿ ಕಾನೂನು ಬಾಹಿರ ಹಾಗೂ ಅಮಾನವೀಯ ಎಂಬ ಪ್ರಜ್ಞೆ ಭಾರತದಲ್ಲಿ ಧಾರ್ಮಿಕ ನೇತೃತ್ವವಹಿಸಿರುವ ಹಲವಾರು ಮಠಾಧೀಶರು ಹಾಗೂ ಸ್ವಾಮೀಜಿಗಳಿಗೆ ಗೊತ್ತಿಲ್ಲದೆ ಇಲ್ಲ. ಆದರೆ, ಅವರು ಸನಾತನತೆಯ ಬದ್ಧತೆಯಲ್ಲಿಯೇ ಅಮಾನವೀಯತೆಯ ಪೋಷಕರಾಗಿದ್ದಾರೆ ಎಂಬುದು ಈ ಕಾರಣವಾಗಿಯೇ ಆದರೂ ಬೆಳಕಿಗೆ ಬಂದಿರುತ್ತದೆ.

ಅಸ್ಪೃಶ್ಯತೆ ಎನ್ನುವುದು ಭಾರತೀಯ ಸಮಾಜದಲ್ಲಿ ಬಹುದೊಡ್ಡ ಮನುಷ್ಯ ವಿರೋಧಿಯಾದಂತಹ ಅಮಾನವೀಯ ಆಚರಣೆಯಾಗಿದೆ. ಆದ್ದರಿಂದ ಅಂಬೇಡ್ಕರ್ ಅವರು ಇದರ ನಿವಾರಣೆಗಾಗಿಯೇ ಸಹ ಭೋಜನ, ಸಹ ಚಿಂತನ ಹಾಗೂ ಅಂತರ್‌ಜಾತಿ ವಿವಾಹಗಳನ್ನು ಪ್ರೋತ್ಸಾಹಿಸಿರುವರು. ಇವರು ಮನದಾಳದ ಅರ್ಥವನ್ನು ಗಮನಿಸಬೇಕು. ಈ ಆಧುನಿಕ ಯುಗದಲ್ಲೂ ನಗರ ಪ್ರದೇಶಗಳಲ್ಲಿ ಅಸ್ಪೃಶ್ಯ ಹಿನ್ನೆಲೆಯ ಉದ್ಯೋಗಸ್ಥರಿಗೆ, ಅಧಿಕಾರಿಗಳಿಗೆ ಬಾಡಿಗೆ ಮನೆಯೂ ಕೂಡ ಸಿಗದ ಸ್ಥಿತಿಯನ್ನು ಕಾಣಲು ಸಾಧ್ಯವಾಗಿರುತ್ತದೆ. ಇದಲ್ಲದೆಯೇ ಕೆಲವೆಡೆಗಳಲ್ಲಿ ಸುಳ್ಳುಜಾತಿಯನ್ನು ಹೇಳುವ ಮೂಲಕ ಬಾಡಿಗೆ ಮನೆಗಳಲ್ಲಿ ವಾಸವಾಗಿರುವುದು ಕೂಡ ಕಂಡುಬರುತ್ತದೆ. ಸುನಾಮಿ ಕಾರಣದಿಂದಾಗಿ ಸಹಸ್ರಾರು ಸಂಖ್ಯೆಯಲ್ಲಿ ಜನರು ನಿರಾಶ್ರಿತರಾಗಿದ್ದಾಗ, ಅವರಿಗಾಗಿ ತಾತ್ಕಾಲಿಕ ವಸತಿ ವ್ಯವಸ್ಥೆಯನ್ನು ನಿರ್ಮಿಸಿದ್ದ ಸಂದರ್ಭದಲ್ಲಿ ಅಲ್ಲಿಯೂ ಸಹ ಅಸ್ಪೃಶ್ಯತೆಯನ್ನು ಆಚರಿಸಿ ಅಮಾನವೀಯತೆಯನ್ನು ಪ್ರದರ್ಶಿಸಿರುವ ಪ್ರಕರಣಗಳಿವೆ. ಈ ರೀತಿಯಾಗಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಹೊಸ ಹೊಸ ಪರಿವೇಷಗಳಲ್ಲಿ ಹಾಗೂ ರೂಪಕಗಳಲ್ಲಿ ಅಸ್ಪೃಶ್ಯತೆಯ ಆಚರಣೆ ಚಾಲ್ತಿಯಲ್ಲಿರುವುದನ್ನು ಪ್ರಸ್ತುತವಾಗಿ ಕೂಡ ಕಾಣಬಹುದು.

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಈ ಅಸ್ಪೃಶ್ಯತೆಯ ನಂತರ ಮಾನವೀಯತೆಗೆ ಹಾಗೂ ಮಾನವತಾವಾದಕ್ಕೆ ಬಹುದೊಡ್ಡ ಪೆಟ್ಟು ಅಥವಾ ಧಕ್ಕೆತಂದಿರೋ ವ್ಯವಸ್ಥೆ ಎಂದರೆ ಜಾತಿಪದ್ಧತಿ.

ಅಂಬೇಡ್ಕರ್ ಅವರು ಈ ಜಾತಿಪದ್ಧತಿಯನ್ನು ಕುರಿತು. 'ಮೇಲುಜಾತಿಯವರಾದರೆ ಪುರಸ್ಕಾರ, ಕೆಳಜಾತಿಯವರಾದರೆ ತಿರಸ್ಕಾರ; ಇದು ಜಾತಿಪದ್ಧತಿಯ ಪ್ರಮುಖಲಕ್ಷಣ ಹೀಗೆ ನಿರ್ಧರಿಸುವಂತಹ ಸ್ಥಿತಿಯೇ ಅಮಾನವೀಯವಾದದು' ಎಂದಿದ್ದಾರೆ. ಈ ಜಾತಿಪದ್ಧತಿಯನ್ನು ಸುದೀರ್ಘವಾಗಿ ಅಂಬೇಡ್ಕರ್ ಅವರು 1916ರಲ್ಲಿ ಅಮೇರಿಕಾದ ಸಂಯುಕ್ತ ಸಂಸ್ಥಾನದ ನ್ಯೂಯಾರ್ಕ್ ನಗರದಲ್ಲಿರುವ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ತಮ್ಮ ಎಂ.ಎ. ಪದವಿಯನ್ನು ಅಧ್ಯಯನ ಮಾಡುತ್ತಿರುವ ಸಂದರ್ಭದಲ್ಲಿ ಈ 'ಭಾರತದಲ್ಲಿ ಜಾತಿಗಳು' ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಪ್ರಬಂಧದನ್ನು ಸಿದ್ಧಪಡಿಸಿ ಡಾ. ಗೋಲ್ಡನ್ ವೀಜರ್ ಅವರ ಮಾನವಶಾಸ್ತ್ರದ ಪ್ರೌಢ ವಿದ್ಯಾರ್ಥಿವರ್ಗದಲ್ಲಿ ಮಂಡಿಸಿದ್ದರು. ಇದರಲ್ಲಿ ಜಾತಿಪದ್ಧತಿಯ ವಿಷಯವನ್ನು ಅವರು ಸ್ವಾಭಾವಿಕವಾಗಿಯೇ ಮಾನವಶಾಸ್ತ್ರದ ದೃಷ್ಟಿಕೋನದಿಂದ ಪರಿಶೀಲಿಸಿದ್ದಾರೆ. ಈ ಪ್ರಬಂಧದಲ್ಲಿ ಭಾರತದ ಜನಸಂಖ್ಯೆ ಆರ್ಯರು, ದ್ರಾವಿಡರು, ಮಂಗೋಲರು ಮತ್ತು ಸಿಥಿಯನ್ನರ ಮಿಶ್ರಣವಾಗಿದೆ. ಕುಲಸಂಬದಲ್ಲಿ ಎಲ್ಲರೂ ವಿಜಾತೀಯರಿದ್ದು, ಕಲಬೆರಕೆಯವದಾಗಿದ್ದರೆ ಎಂದು ಪ್ರಸ್ತಾಪಿಸಿರುವುದನ್ನು ಸಹ ಕಾಣಬಹುದು.

ಅಂಬೇಡ್ಕರ್ ಅವರ ಪ್ರಕಾರ ಭಾರತೀಯ ಭೂಖಂಡದ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗಿನ ಜನರು ಸಾಂಸ್ಕೃತಿಕ ಏಕತೆಯಿಂದ ಒಂದುಗೂಡಿದ್ದಾರೆ. ಆದರೆ, ಜಾತಿಯ ಬಗೆಗೆ ಇರುವ ವಿವಿಧ ಅಧಿಕೃತ ಸಿದ್ಧಾಂತಗಳನ್ನು ಪರಿಶೀಲಿಸಿದ ನಂತರ, ಜಾತಿ ಸಮೂಹಗಳ ರಚನೆಗೆ ಸಂಬಂಧಿಸಿದಂತೆ ಭಿನ್ನ ಭಿನ್ನ ಗೋತ್ರ ವಿವಾಹ ಪದ್ಧತಿಯ ಮೇಲೆ ಸ್ವಗೋತ್ರ ವಿವಾಹ ಪದ್ಧತಿಯ ಮೇಲುಗೈ ಆದುದೇ ಪ್ರಧಾನವಾದ ಕಾರಣವೆಂದು ವಿಶ್ಲೇಷಿಸಿದ್ದಾರೆ. ಸ್ವಗೋತ್ರ ವಿವಾಹದ ಬಗೆಗೆ ಹೇಳುತ್ತಾ 'ಸತಿ' ಪದ್ಧತಿ ಕಡ್ಡಾಯ ವಿಧವಾಪದ್ಧತಿ ಹಾಗೂ ಬಾಲ್ಯವಿವಾಹಗಳು ಈ ಸ್ವಗೋತ್ರ ವಿವಾಹ ಪದ್ಧತಿಯ ಪರಿಣಾಮಗಳಾಗಿವೆ. ಅಂಬೇಡ್ಕರ್ ಅವರ ಅಭಿಪ್ರಾಯದ ಪ್ರಕಾರ ಸಮಾಜದಲ್ಲಿ ಗುಂಪುಗಳ ರಚನೆ ಒಂದು ಸ್ವಾಭಾವಿಕ ಪ್ರಕ್ರಿಯೆಯಾಗಿದ್ದು, ಈ ಗುಂಪುಗಳು ಬಹಿಷ್ಕಾರ ಹಾಗೂ ಅನುಕರಣೆಯ ಮೂಲಕ ಕ್ರಮೇಣ ಜಾತಿಗಳಾಗಿ ಪರಿವರ್ತಿತಗೊಂಡಿರುತ್ತವೆ ಎಂದು ತಿಳಿಸಿರುತ್ತಾರೆ. ಈ ಜಾತಿಪದ್ಧತಿಗೆ ಬಹುಮುಖ್ಯವಾಗಿ ಕಾರಣವಾಗಿರುವ ವೇದಶಾಸ್ತ್ರ ಪುರಾಣಗಳೊಟ್ಟಿಗೆ ಮುಖಾಮುಖಿಯಾಗಿ ಸುದೀರ್ಘ ಸಂವಾದವನ್ನು ಅಂಬೇಡ್ಕರ್ ಅವರು ನಡೆಸಿರುತ್ತಾರೆ. ಈ ಕಾರಣವಾಗಿ 'ವೇದಗಳು, ಅನಂತ, ಅನಾದಿ, ಸತ್ಯಾಸತ್ಯ, ಪವಿತ್ರ ಎಂಬುದನ್ನು ಬೋಧಿಸಿ ವೈದಿಕ ಸಮಾಜವನ್ನು ಜಡಕಟ್ಟಿದ ಸಮಾಜವನ್ನಾಗಿ ಮಾಡಲಾಗಿದೆ' ಎಂದು ಅಂಬೇಡ್ಕರ್ ಅವರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಅಂಬೇಡ್ಕರ್ ಅವರು ಭಾರತೀಯ ವೈದಿಕರ ವಿರುದ್ಧ ಪ್ರತಿಭಟನೆಯನ್ನು ಮಾಡುವ ಸಂದರ್ಭದಲ್ಲಿ 1927ನೇ ಡಿಸೆಂಬರ್ 27ರಂದು ಮಹಾರಾಷ್ಟ್ರದ ಮಹಾನ್ ನಗರದಲ್ಲಿ ನಡೆದಿರುವ ನಿಮ್ನವರ್ಗದವರ ಬೃಹತ್ ವಿಮೋಚನಾ ಸಮಾವೇಶದಲ್ಲಿ ಮನುಸ್ಮೃತಿಯನ್ನು ಬಹಿರಂಗವಾಗಿ

ಸಾರ್ವಜನಿಕರ ಎದುರಿಗೆ ಬೆಂಕಿಯನ್ನು ಹಚ್ಚುವ ಮೂಲಕ ಅವರ ಪ್ರಖರ ಪ್ರತಿಭಟನೆ ಎನ್ನೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಈ ಸ್ಮೃತಿಯು ಮಾನವನ ಬದುಕುವ ಮಾನವೀಯಹಕ್ಕುಗಳನ್ನೇ ನಿರ್ಬಂಧಿಸಿರುವಂತಹ ಕೃತಿಯನ್ನು ದಹಿಸುವುದಾಗಿದೆ. ಇದು ಕೇವಲ ಸಾಂಕೇತಿಕವಲ್ಲ. ಬದಲಿಗೆ ಇಡೀ ಭಾರತೀಯ ಮನಸ್ಸುಗಳು ಈ ಕ್ರೌರ್ಯತೆಯನ್ನು ಪ್ರತಿಬಿಂಬಿಸುವ ಮನುವಿನ ಪದ್ಧತಿಯಿಂದಲೇ ಮಾನಸಿಕವಾಗಿ ಬಿಡುಗಡೆಗೊಂಡು ಮಾನವೀಯ ಕಾರುಣ್ಯದಲ್ಲಿ ಪರಸ್ಪರ ಪ್ರೀತಿ–ಗೌರವಗಳೊಂದಿಗೆ ಬದುಕುವುದನ್ನು ಹಪಹಪಿಸುವ ವಿವೇಕವಾಗಿದೆ.

ಅಂಬೇಡ್ಕರ್ ಅವರು 'ಪ್ರತಿಯೊಬ್ಬ ಮಹಿಳೆ ಮತ್ತು ಪುರುಷರನ್ನು ಶಾಸ್ತ್ರ ಪುರಾಣ ಗ್ರಂಥಗಳ ಗುಲಾಮಗಿರಿಯಿಂದ ಮುಕ್ತಗೊಳಿಸುವ ಹಾಗೂ ಈ ಗ್ರಂಥಗಳ ಆಧಾರಿತವಾದ ವಿನಾಶಕಾರಿ ಭಾವನೆಗಳಿಂದ ಅವರ ಮನಸ್ಸುಗಳನ್ನು ಶುದ್ಧಗೊಳಿಸಿದಾಗ ಮಹಿಳೆ ಹಾಗೂ ಪುರುಷರು ಸಹಪಂಕ್ತಿ ಭೋಜನ, ಅಂತರ್ಜಾತಿ ವಿವಾಹಕ್ಕೆ ಮುಂದಾಗುತ್ತಾರೆ. ಜಾತಿ ಮತ್ತು ಅಸ್ಪೃಶ್ಯತೆ ನಿರ್ಮೂಲವಾಗುತ್ತದೆ' ಎಂದು ಹೇಳುವ ಕಳಕಳಿಯೂ ಇಲ್ಲಿ ಗಮನಾರ್ಹವಾದುದು. ಆದುದ್ದರಿಂದ ಅಂಬೇಡ್ಕರ್ ಅವರು ಮಾನಸಿಕ ಪರಿವರ್ತನೆಗೆ ಹೆಚ್ಚು ಒತ್ತನ್ನು ನೀಡಿರುತ್ತಾರೆ. ಹಿಂಸೆಯನ್ನು ಬೋಧಿಸುವಂಥ ಪುರಾತನ ಸನಾತನವಾದಿಗಳಿಂದ ರಚಿತವಾಗಿರುವ ಗ್ರಂಥಗಳನ್ನು ಅಂಬೇಡ್ಕರ್ ಅವರು ಸರಾಸಗಟಾಗಿ ನಿರಾಕರಿಸಿರುತ್ತಾರೆ.

ಅಸಮಾನತೆಯನ್ನು ಸಾರುವ, ಹಿಂಸೆಯನ್ನು ಪ್ರಚೋದಿಸುವ ಆ ಮೂಲಕ ಮಾನವೀಯತೆಯನ್ನು ದಮನಿಸುವ ಕೃತಿ ಹಾಗೂ ನಡವಳಿಕೆಯನ್ನು ಪ್ರಬಲವಾಗಿ ಅಂಬೇಡ್ಕರ್ ಅವರು ಇಂತಹ ಸಾಮಾಜಿಕ ಅಸಮಾನತೆಗೆ ಧಾರ್ಮಿಕ ನಂಬಿಕೆಯೇ ಪ್ರಧಾನವಾಗಿ ಕಾರಣವೆಂಬ ನಿಲುವುಳ್ಳವರಾಗಿದ್ದರು. ಹಾಗಾಗಿಯೇ ಮೊಟ್ಟಮೊದಲು ಧರ್ಮ ಎಂಬುದು ಮಾನವೀಯಗೊಳ್ಳಬೇಕು. ಆ ಮುಖೇನ ಮಾನವೀಯತೆಯನ್ನು ಎತ್ತಿ ಹಿಡಿಯಬೇಕೆಂಬ ಆಶಯವನ್ನು ಈ ಮಹಾನ್ ಮಾನವತಾವಾದಿಯಾ ಚಿಂತನೆಗಳಲ್ಲಿ ವ್ಯಕ್ತವಾಗುತ್ತದೆ. ಅಂಬೇಡ್ಕರ್ ಅವರು ಸ್ವಾಭಿಮಾನ, ವ್ಯಕ್ತಿ ಗೌರವ, ಸಮಾನತೆ, ಮಾನವನ ಘನತೆ ಇವುಗಳನ್ನು ಕುರಿತಾಗಿ ಪದೇ ಪದೇ ಮಾತಾನಾಡುವುದು ಈ ಹಿನ್ನಲೆಯಲ್ಲಿಯೇ ಅಂಬೇಡ್ಕರ್ ಅವರು ಬೌದ್ಧಧಮ್ಮವನ್ನು ಅಪ್ಪಿಕೊಳ್ಳುವಲ್ಲಿ ಇಂತಹ ಬಹುದೊಡ್ಡದಾದಂತಹ ನಿರೀಕ್ಷೆ ಇತ್ತು ಎಂಬುದನ್ನು ಈ ಜಗತ್ತು ಹರಿಯಬೇಕಾಗಿದೆ.

ಬುದ್ಧಗುರು ಈ ಎಲ್ಲಾ ಕಾರಣಗಳಾಗಿಯೇ ಮಾನವೀಯತೆಯನ್ನು ಪ್ರತಿವಾದಿಸಿರುವ ಪ್ರಪ್ರಥಮ ಪ್ರತಿಪಾದಕರಾಗಿ ಮತ್ತು ಧಾರ್ಮಿಕ, ಸಾಮಾಜಿಕ ಸುಧಾರಕರಾಗಿ ಕಾಣಿಸಿಕೊಳ್ಳುತ್ತಾರೆ. ಇದನ್ನು ಅಂಬೇಡ್ಕರ್ ಅವರು ಕೂಡಾ ಹೇಳಿದ್ದಾರೆ. ಬುದ್ಧಗುರು ಚಾತುರ್ವರ್ಣ, ಜಾತಿಪದ್ಧತಿ ಹಾಗೂ ಲಿಂಗ ಅಸಮಾನತೆಯ ಏಣಿಶ್ರೇಣಿಕರಣಗಳನ್ನು ಖಂಡಿಸಿದವರು. ಹಿಂಸೆಯ ಬದಲಿಗೆ ಪ್ರಜ್ಞಾ, ಸಮತಾ ಹಾಗೂ

ಕರುಣೆಯ ಬಗೆಗೆ ಮಾತಾನಾಡುತ್ತಾ, ಮಾನವೀಯತೆಯನ್ನು ಪ್ರಬಲವಾಗಿ ಪ್ರತಿವಾದಿಸಿದವರು. ತನ್ನ ಪ್ರೀತಿಯ ಸ್ಪರ್ಶ ಹಾಗೂ ಮಾತುಗಳ ಮೂಲಕವೇ ಹಿಂಸೆಯಲ್ಲಿ ತೊಡಗಿದ ಅಂಗೂಲಿಮಾಲನನ್ನು ಪರಿವರ್ತಿಸಿ ಸಮುದಾಯದೊಟ್ಟಿಗೆ ಬದುಕುವಂತೆ ಮಾಡಿದವರು. ಬುದ್ಧಗುರು ವೈಚಾರಿಕ, ವೈಜ್ಞಾನಿಕ ಮನೋಭಾವನೆಗೆ ಹೆಸರಾದವರು.ಹೀಗಾಗಿ, ಅಂಬೇಡ್ಕರ್ ಅವರು ಭಾರತವು ಬುದ್ಧಭಾರತವಾಗಬೇಕೆಂದು ಹಪಹಪಿಸಿದವರು. ಅವರ ಪ್ರಯತ್ನದ ಫಲವಾಗಿ ನಮ್ಮ ರಾಷ್ಟ್ರದ ತ್ರಿವರ್ಣ ಧ್ವಜದಲ್ಲಿ ಬೌದ್ಧಸಂಸ್ಕೃತಿಯ ಅಶೋಕ ಚಕ್ರ ಬರುವಂತಾಯಿತು. ನಮ್ಮ ದೇಶದ ಪವಿತ್ರ ಗ್ರಂಥವಾದ ಸಂವಿಧಾನದಲ್ಲಿ ಬುದ್ಧಗುರುವಿನ ಜೀವಪರ ಚಿಂತನೆಗಳೇ ಅಡಗಿವೆ. ಇವೆಲವೂ ಮಾನವೀಯತೆಯ ಪ್ರತಿವಾದವೇ ಆಗಿದೆ ಎಂಬುದೇ ನಮ್ಮ ನಂಬಿಕೆ. ಯಾರೆನೆಂದರು ಇಂದು ನಾವು ಒಪ್ಪಿಕೊಂಡಿರುವ ಪ್ರಜಾಪ್ರಭುತ್ವದ ಕಲ್ಪನೆಯಾಗಿದೆ. ಅದೇ ಬುದ್ಧಗುರುವಿನ ಸಂಘದ ಪರಿಕಲ್ಪನೆಯಾಗಿದೆ.

ಅಂಬೇಡ್ಕರ್ ಅವರಿಗೆ ಮನಸ್ಸನ್ನು ನಿತ್ಯ ಪರಿವರ್ತಿಸುವ, ಗುಣಾತ್ಮಕವಾಗಿ ಮತ್ತು ಮಂಗಳ ಕರವಾಗಿ ಇರುವಂತೆ ಪ್ರೇರೇಪಿಸುವ ಬುದ್ಧತತ್ವ ಪ್ರೀಯ. ಇಲ್ಲಿ ಗಮನಿಸಬೇಕಾದ ಬಹುಮುಖ್ಯವಾದ ಅಂಶವೆಂದರೆ, ಇಲ್ಲಿ ಬುದ್ಧತತ್ವವೆಂದರೆ, ಅದು ಎಲ್ಲೋ ಅಲೌಕಿಕವಾಗಿಯೇ, ಅಭೌತಿಕವಾಗಿಯೋ ಇರುವುದಿಲ್ಲ. ಅದು ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿಯೂ ಇರುವಂತಹದ್ದು. ಸಿದ್ಧಾರ್ಥ ಗೌತಮನು ಬುದ್ಧನಾದ ಬಗೆಯದು. ಬುದ್ಧಗುರುವೇ ಹೇಳಿದ ಎಲ್ಲರಲ್ಲಿಯೂ ಬೋಧಿಸತ್ವ ಇರುತ್ತವೆ. ಅದನ್ನು ಎಚ್ಚರಿಸಬೇಕು ಎಂಬ ಸೂಕ್ಷ್ಮತೆಯುಳ್ಳದ್ದು ಎಂದಿದ್ದಾರೆ.

ಅಂಬೇಡ್ಕರ್ ಅವರು 1930ರಲ್ಲಿ ಅಸ್ಪೃಶ್ಯರಿಗೆ ದೇವಾಲಯಗಳ ಪ್ರವೇಶಕ್ಕಾಗಿ ಪ್ರತಿಭಟಿಸಿದರು. ನಾಸಿಕ್‌ನ ಕಾಲರಾಮದೇವಾಯ, ಪೂನಾದ ಶಿವಪಾರ್ವತಿ ದೇವಾಯ ಹಾಗೂ ವಿಘ್ನೇಶ್ವರ ದೇವಾಲಯಗಳ ಪ್ರವೇಶ ಚಳುವಳಿಯನ್ನು ಕೈಗೊಂಡಿರುತ್ತಾರೆ. ಆದರೆ, ಅದನ್ನು ಅರ್ಧಕ್ಕೆ ನಿಲ್ಲಿಸುತ್ತಾರೆ. ದೇವಾಲಯ ಪ್ರವೇಶದ ಚಳವಳಿ ಎಂಬುದು ನಿರರ್ಥಕ ಶ್ರಮ ಎಂಬುದೇ ಇವರ ಅಭಿಪ್ರಾಯ. ಇಂಥ ದೇವಾಲಯ ಪ್ರವೇಶದಿಂದ ಅದೇ ಸನಾತನ ಪುರೋಹಿತಶಾಹಿಯ ಮತಮೌಢ್ಯಕ್ಕೆ ಸಿಲುಕಿಕೊಳ್ಳುವ ಅಸಮಾನತೆಯನ್ನು ಒಪ್ಪಿಕೊಳ್ಳುವ ನಂಬಿಕೆಯೇ ಘಟಿಸುತ್ತದೆ. ಆದ್ದರಿಂದ ಯಾವುದೇ ಪ್ರಯೋಜನವಿಲ್ಲ. ಬದಲಾಗಿ ಅಸ್ಪೃಶ್ಯರು ತಮ್ಮ ಮಾನವೀಯತೆ, ಸ್ವಾಭಿಮಾನ, ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಬೇಕೆಂದು ಅಂಬೇಡ್ಕರ್ ಅವರ ಪ್ರತಿಪಾದನೆಯಾಗಿದೆ. ಇದು ಸತ್ಯವೂ ಕೂಡ.

ಹಿಂದೂ ದೇವಾಲಯವನ್ನು ಪ್ರವೇಶಿಸಿದ ಕಾರಣಕ್ಕಾಗಿಯೇ ಅನೇಕ ಕಡೆಗಳಲ್ಲಿ ಅಸ್ಪೃಶ್ಯರು ಕೊಲೆಯಾದ, ದೌರ್ಜನ್ಯಕ್ಕೆ ಒಳಗಾದ ಪ್ರಕರಣಗಳಿವೆ ಮತ್ತು ಇಂದಿಗೂ ಇಂತಹ ಅಸ್ಪೃಶ್ಯತಾ ಆಚರಣೆಯ ಹಿನ್ನೆಲೆಯಲ್ಲಿ ಬಗೆಬಗೆಯ ಹಿಂಸೆಗಳು ನಡೆಯುತ್ತಲೇ ಇವೆ.ಆ ಮೂಲಕ ಪ್ರತಿನಿತ್ಯ ಮಾನವೀಯತೆಯನ್ನು ಉಲ್ಲಂಘಿಸಲಾಗುತ್ತಿದೆ. ಮಾನವ ಘನತೆಗೆ ಭಂಗವನ್ನುಂಟುಮಾಡುವ ಪ್ರತಿಯೊಂದು ನಡವಳಿಕೆಗೂ

ಮನುಷ್ಯನ ಕಾರಣದಿಂದಲೇ ಉದ್ಭವಿಸಿರುವಂತಹವು. ಹಾಗಾಗಿ ಅಂತದ್ದನ್ನೂ ಸಂಪೂರ್ಣವಾಗಿ ಇಲ್ಲವಾಗಿಸಲು ಮನುಷ್ಯನೇ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು. ನಡವಳಿಕೆಗಳಿಗೆ ಅಜ್ಞಾನವೇ ಕಾರಣ ಎಂಬ ಅಭಿಪ್ರಾಯವು ಅಂಬೇಡ್ಕರ್ ಅವರದಾಗಿತ್ತು.

ಅಂಬೇಡ್ಕರ್ ಅವರು ಮೊದಲು ತಮ್ಮನ್ನು ತಾವೇ ಎಲ್ಲ ಬಗೆಯ ಅಪಮಾನಗಳಿಂದ ಬಿಡಿಸಿಕೊಂಡು ಜೀವಪರ ವೈಚಾರಿಕತೆಗೆ ಮುಖ ಮಾಡಿದವರಾಗಿದ್ದಾರೆ. ಅವರ ಇಡೀ ಬದುಕಿನ ನಡಿಗೆಯೇ ಈ ಬಗೆಯ ಗುಣಾತ್ಮಕ ಮಾರ್ಗದ್ದಾಗಿದೆ. ವಿದ್ಯೆಯನ್ನೇ ನಿರಾಕರಿಸುವ ಅಸ್ಪೃಶ್ಯ ಸಮುದಾಯದಿಂದ ಬಂದು ಅಪಾರ ವಿದ್ಯೆಯನ್ನು, ಹಲವಾರು ವಿಶ್ವ ಶ್ರೇಷ್ಠ ಪದವಿಗಳನ್ನು ಗಳಿಸಿದ್ದು, ಸ್ವತಃ ಸಂಸ್ಕೃತವನ್ನು ಕಲಿತದ್ದು, ಪುರಾಣ–ಧರ್ಮಶಾಸ್ತ್ರಗಳನ್ನು ವಿಮರ್ಶಿಸಿದ್ದು, ಭಾರತದ ಚರಿತ್ರೆಯನ್ನು ಬೇರೆ ರೀತಿ ಕಟ್ಟಿದ್ದು, ಗಾಂಧೀಜಿ ಹಾಗೂ ಕಾಂಗ್ರೆಸ್ಸಿನೊಟ್ಟಿಗೆ ಸಂಘರ್ಷಿಸಿ ಅವರ ಕಾರ್ಯರೂಪಗಳನ್ನು ಇನ್ನಷ್ಟು ಗುಣಾತ್ಮಕಗೊಳಿಸಿದ್ದು,ಭಾರತದ ಸಂವಿಧಾನ ರಚಿಸಿದ್ದು, ಮಹಿಳೆಯರ ವಿಮೋಚನೆಗಾಗಿ ಹಿಂದೂ ಕೋಡ್ ಬಿಲ್ ಮಂಡಿಸಿ ಅದು ಸಂಸತ್ತಿನಲ್ಲಿ ಚರ್ಚೆಯಾಗದಿದ್ದಾಗ ತಮ್ಮ ಕಾನೂನು ಮಂತ್ರಿ ಪದವಿಗೆ ರಾಜಿನಾಮೆ ನೀಡಿದ್ದು, ಬೌದ್ಧಧಮ್ಮವನ್ನು ಸೇರಿದ್ದು, ತಮ್ಮ ಅಖಂಡ ಹೋರಾಟಗಳಲ್ಲಿ ಅಹಿಂಸೆಯನ್ನು ಪ್ರಧಾನವಾಗಿ ಪ್ರತಿವಾದಿಸಿದ್ದು, ಇವೆಲ್ಲವೂ ಕೂಡ ಮಾನವೀಯ ಮೌಲ್ಯಗಳನ್ನು ಸಮಾಜದಲ್ಲಿ ಪ್ರತಿಪಾದಿಸುವ ತುಡಿತಗಳೇ ಆಗಿರುತ್ತವೆ. ಇಂಥ ಮಾನವೀಯತೆಯ ತುಡಿತ ಹಾಗೂ ಮಾನವ ಪರ ಕಾಳಜಿಗಳನ್ನು ಅಂಬೇಡ್ಕರ್ ಅವರು ಸದಾ ಕಾಯ್ದುಕೊಂಡದ್ದು, ತುಂಬಾ ಸ್ವಾಭಿಮಾನ ಜಗತ್ತಿನ ಬಗೆಗೆ ಕ್ಷೇಮ, ಅಪಾರ ಜೀವನ ಪ್ರೀತಿ ಹಾಗೂ ಲೋಕದ ಸರಿತಪ್ಪುಗಳನ್ನು ವಿಮರ್ಶಿಸುವ ವಿವೇಕ. ಇಂತಹದ್ದು ಬಹಳ ವಿಶಿಷ್ಟವಾದುದು. ಜೊತೆಗೆ ನಿರ್ಭೀತಿ ಮತ್ತು ನೈತಿಕತೆಯಿಂದ ಕೂಡಿರುವಂತಹದ್ದು ಕಂಡುಬಂದಿರುತ್ತದೆ.

ಒಟ್ಟಾರೆ ಮಾನವೀಯತೆಯ ಮೌಲ್ಯಗಳು ಎಲ್ಲೆಲ್ಲಿ ಉಲ್ಲಂಘನೆ ಹಾಗೂ ಅಸಮಾನತೆ ಉಂಟಾಗುತ್ತದೆ. ಅಲ್ಲಿ ಅಂಬೇಡ್ಕರ್ ಅವರಂತಹ ವ್ಯಕ್ತಿತ್ವಗಳ ಅನಿವಾರ್ಯತೆ ಉಂಟಾಗುತ್ತದೆ. ಇವರ ಜೀವಪರ ಚಿಂತನೆಗಳು, ಹೋರಾಟಗಳು ಮಾನವೀಯತೆಯು ಹೊಸಪಾಠಗಳನ್ನು ಕಲಿಸುತ್ತದೆ. ಮಹಿಳೆ ಅಭಿವೃದ್ಧಿಯಲ್ಲಿ ವಿಮೋಚನೆಯಲ್ಲಿ ಇಡೀ ಸಮಾಜದ ಅಭಿವೃದ್ಧಿ ಹಾಗೂ ವಿವೇಚನೆ ಅಡಗಿದೆ ಎಂಬ ನಿಲುವು ಅವರದು.ಮಾನವೀಯತೆಯ ಬಗೆಗೆ, ಮಾತಾನಾಡುವಾಗ ಮಹಿಳೆಯು ಬಹು ಮುಖ್ಯಳಾಗುತ್ತಾಳೆ ಎನ್ನುವುದೇ ಇಲ್ಲಿ ಬಹುಪ್ರಮುಖವಾದುದು. ಮಹಿಳೆ ಕುರಿತು ಅಂಬೇಡ್ಕರ್ ಅವರಿಗಿದ್ದ ಅಭಿಪ್ರಾಯಗಳು ಸಾಕಷ್ಟು ಚರ್ಚೆ ಮಾಡಬಹುದಾದ ವಿಷಯವಾಗಿದೆ. ಅದೇನೇ ಇರಲಿ ಇಲ್ಲಿ ಪ್ರಧಾನವಾಗಿ ಮಾನವತೆಗೆ ತೊಡಕಾಗಿರುವಂತಹ ಸಮಗ್ರವಾಗಿ ಎಲ್ಲಾ ಬಗೆಯ ವಿಚಾರಗಳನ್ನು ಪ್ರತಿಯೊಬ್ಬ ವ್ಯಕ್ತಿಯು ತನಗೆ ತಾನೇ ನಾಶಗೊಳಿಸಿಕೊಳ್ಳುವ ಮೂಲಕ ಮಾತ್ರ ಅಹಿಂಸೆ ಸಾಧ್ಯ ಎಂದಿದ್ದಾನೆ. ಆ ಮೂಲಕವಾಗಿ

ಮಾನವೀಯತೆಯ ಪ್ರತಿಷ್ಠಾಪನೆ ಸಾಧ್ಯ. ಇದಕ್ಕೆ ಅಂಬೇಡ್ಕರ್ ಅವರು ಯಾವಾಗಲೂ ದಾರಿದೀಪವಾಗಲಿದ್ದಾರೆ. ಹೀಗೆ, ಅಂಬೇಡ್ಕರ್ ಅವರು ಸಾಮಾಜಿಕ, ಆರ್ಥಿಕ, ರಾಜಕೀಯ ತಜ್ಞ, ಸಂಘಟನಕಾರ, ಪತ್ರಕರ್ತ, ಸಂಸದೀಯ ಪಟು, ಸಾಮಾಜಿಕ ನ್ಯಾಯದ ಪ್ರಬಲ ಪ್ರತಿಪಾದಕ, ರಾಷ್ಟ್ರನಾಯಕ ಮಾತ್ರವಾಗಿರದೇ, ಅವರೊಬ್ಬ ಮಹಾನ್ ಮಾನವತಾವಾದಿಯಾಗಿದ್ದರು. ವಿಶ್ವಮಾನವರಾದ ಇವರು ಕೇವಲ ಭಾರತೀಯ ಶೋಷಿತರ ಹಿತಕ್ಕೆ ಮಾತ್ರ ಶ್ರಮಿಸದೇ ಇಡೀ ವಿಶ್ವದ ಅನ್ಯಾಯಕ್ಕೆ ಒಳಗಾದ ಜನರ ಧ್ವನಿಯಾಗಿದ್ದರು. ಇಂದು ಜಾಗತೀಕ ಮಟ್ಟದಲ್ಲಿ ಹೆಚ್ಚು ಹೆಚ್ಚು ಚರ್ಚಿಸುವ ವ್ಯಕ್ತಿತ್ವ ಹಾಗೂ ಸಮಸ್ಯಗಳ ಪರಿಹಾರ ರೂಪಿ ವಿಷಯಗಳು ಇವರ ಸಮಗ್ರ ಚಿಂತನೆ ನೀಡುತ್ತವೆ ಎಂಬುದನ್ನು ವಿಶ್ವಸಂಸ್ಥೆಯೇ 2016ರಲ್ಲಿ ವಿಶ್ವಜ್ಞಾನ ಸಂಕೇತ ಎಂದು ಘೋಷಿಸಿರುವುದು ಅವರ ಮಾನವಪರ ಮತ್ತು ಜೀವಪರ ಕಾಳಜಿಯನ್ನು ತಳಮಟ್ಟದಲ್ಲಿ ಸದಾಕಾಲವು ಬೋಧಿಸುತ್ತದೆ.

## ಪರಾಮರ್ಶನ ಗ್ರಂಥಗಳು


1. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂಪುಟಗಳು –1 ರಿಂದ 22, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು, 2015
2. ದತ್ತಾತ್ರೇಯ ಇಕ್ಕಳಿಕಿ (ಸಂ), ಅಂಬೇಡ್ಕರ್ ಚಿಂತನೆ, ಸುಮೇದನ ಪ್ರಕಾಶನ, ಗುಲ್ಬರ್ಗ, 2006
3. ದತ್ತಾತ್ರೇಯ ಪೂಜಾರಿ, ಗೀತಾ ಪೂಜಾರಿ, (ಸಂ) ಡಾ. ಬಿ.ಆರ್. ಅಂಬೇಡ್ಕರ್ ಅವರ ಬಹಿಷ್ಕೃತ ಭಾರತದಲ್ಲಿನ ಸ್ಫುಟ ಲೇಖನಗಳು, ಸಾಗರದೀಪ ಪ್ರಕಾಶನ, ಕಾರವಾರ, 1986
4. ಚಂದ್ರಶೇಖರ್.ಎಸ್, ಗಾಂಧೀ ಮತ್ತು ಅಂಬೇಡ್ಕರ್, ಆದರ್ಶ ಪ್ರಕಾಶನ, ಸಾಗರ, 1992
5. ತುಕಾರಾಮ್.ಎಸ್. ಲೋಕಶಿಕ್ಷಣ (ಗಾಂಧೀ, ಅಂಬೇಡ್ಕರ್ ಮತ್ತು ಫ್ರೆಯರೆಯವರ ತಾತ್ವಿಕ ನೆಲೆಗಟ್ಟಿನಲ್ಲಿ ಕರ್ನಾಟಕ ಸಾಕ್ಷರತಾ ಆಂದೋಲನ), ರೂಪ ಪ್ರಕಾಶ, ಮೈಸೂರು, 2012
6. ಗೋಪಾಲ್.ಜಿ. ನವಭಾರತ ನಿರ್ಮಾಪಕರು ಡಾ.ಬಿ.ಆರ್.ಅಂಬೇಡ್ಕರ್, ಸಮಕ್ಯ ಪ್ರಕಾಶನ, ಮೈಸೂರು, 2017
7. ಗೋಪಾಲ್.ಬಿ, ಸಮಾಜ ಪರಿವರ್ತನಕಾರ ಮಹಾತ್ಮ ಜ್ಯೋತಿ ಬಾಫುಲೆ, ಸಮಾಜ ಪರಿವರ್ತನ ಪ್ರಕಾಶನ, ಬೆಂಗಳೂರು, 2010
8. ಗೋಪಿನಾಥ್.ಎಂ, (ಅನು) ಡಾ. ಬಿ.ಆರ್. ಅಂಬೇಡ್ಕರ್ (ಮೂಲ) ಪೂನಾ ಒಡಂಬಡಿಕೆ, ಆದಿ ಜನರ ಅರಿವಿನ ಜಾಥಾ ಸಮಿತಿ, ಬೆಂಗಳೂರು, 1995
9. ಗೇಲ್ ಆಮ್‌ವೆಡ್ತ್ (ಇಂಗ್ಲೀಷ್), ರಾಹು (ಅನು), ಅಂಬೇಡ್ಕರ್ ಪ್ರಭುದ್ಧ ಭಾರತದ ದ್ರಷ್ಟಾರ, ಸುಮೇಧ ಪ್ರಕಾಶನ, ಗುಲ್ಬರ್ಗಾ, 2010
10. ಕಕ್ಕೀಲಯ್ಯ.ಎಂ.ಎನ್,ಅಂಬೇಡ್ಕರ್‌ಮತ್ತು ದಲಿತ ವಿಮೋಚನೆ,ಜಾಗೃತಿ ವೇದಿಕೆ,ಬೆಂಗಳೂರು,1997.